
ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 18 ಮೇ 2, 1982 ಬೆಲೆ 60 ಪೈಸೆ

ಅಂತರರಾಷ್ಟ್ರೀಯ ಗೀತೆ



ಉಪವಾಸ ಪೀಡಿತ ಜನರೆ
ಗತಿಹೀನ ದೀನರೆ ಏಳಿ
ಅನ್ಯಾಯದ ಮರ್ದನಮಾಡಿ
ಹೊಸ ಲೋಕ ಕಟ್ಟುವ ಏಳಿ

ಬೀಸಾಡಿ ಮೌಢ್ಯದ ಮೋಡಿ
ಎದ್ದೇಳಿ ದಾಸ್ಯವ ಹರಿಸಿ
ಹುಡಿಗೂಡಿಸಿರಿ ಹಳೆ ರೂಢಿ
ನೆಲಮಾರಿ ಸಗ್ಗವ ಜೈಸಿ

ಕೈಬೀಸಿ ರಣರಂಗಕೆ ಸಾಗಿ
ಇದುವೇ ಅಂತಿಮ ಸಮರ
ಹಾಡೋಣ ಇಂಟರ್ ನ್ಯಾಷನೇಲ್
ಒಂದಾಗಿಸೆ ಮನುಕುಲವ

(Internationale)
ಅನುವಾದ—ಎಸ್. ಆರ್. ಭಟ್

ಅಂತರರಾಷ್ಟ್ರೀಯ ಗೀತೆಯ ಬಗ್ಗೆ —

ಅಂತರರಾಷ್ಟ್ರೀಯ ಗೀತೆಯನ್ನು ರಚಿಸಿದವರು ಐತಿಹಾಸಿಕ ಪ್ಯಾರಿಸ್ ಕಮ್ಯೂನ್‌ನ ಸದಸ್ಯರಲ್ಲೊಬ್ಬರಾದ ಯೂಜಿನ್ ಪೊಷಿಯರ್ (Eugine Positer—1816-1817). ರಾಗ ಸಂಯೋಜಕರು ಪಿಯರೆ ಡೇಗೆತರ್ (Pierre Deygetter). ಇಂಗ್ಲೀಷಿಗೆ ಎರಡು ಅನುವಾದಗಳಾದವು. ಭಾರತೀಯ ಭಾಷೆಗಳಲ್ಲಿ 1922ರಲ್ಲಿ ಉರ್ದುವಿನಲ್ಲಿ ರಹಮತ್ ಆಲೀಖಾನರ ಅನುವಾದವೇ ಪ್ರಥಮ. 1930ರಲ್ಲಿ ಹರೀಂದ್ರನಾಥ ಚಟ್ಟೋಪಾಧ್ಯಾಯರು ಹಿಂದೀ ಅನುವಾದ ನೀಡಿದರು. ಬಂಗಾಲಿಯಲ್ಲಿ 1927ರಲ್ಲಿ ಖಾಜಿ ನಜರುಲ್ ಇಸ್ಲಾಂರವರು ಇತ್ತುದೇ ಪ್ರಥಮ ಅನುವಾದವಾದರೂ ಅದನ್ನು ರಾಗಕ್ಕೆ ಹೊಂದಿಸಲಾಗಲಿಲ್ಲ. 1942ರಲ್ಲಿ ಮೊಹಿತ್ ಬ್ಯಾನರ್ಜಿಯವರು ಮಾಡಿದ ಅನುವಾದವನ್ನು ರಾಗಕ್ಕೆ ಹೊಂದಿಸಲಾಯ್ತು. ಈ ಮೇಲೆ ಕೊಟ್ಟಿರುವ ಅನುವಾದ ಇಂಗ್ಲೆಂಡಿನಲ್ಲಿ ಬಳಕೆಯಲ್ಲಿರುವ ಪಾಠವನ್ನು ಅನುಸರಿಸಿದೆ.

ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆ

ಅಂತರಾಷ್ಟ್ರೀಯ ಐಕ್ಯತಾ ದಿನವಾದ ಮೇ ದಿನದಂದು ಸಮಸ್ತ ಕಾರ್ಮಿಕ ವರ್ಗಕ್ಕೆ ಐಕ್ಯರಂಗವು ಕ್ರಾಂತಿಕಾರಿ ಶುಭಾಶಯ ಸಲ್ಲಿಸುತ್ತದೆ.

ವಿಶ್ವದ ಕಾರ್ಮಿಕ ವರ್ಗದ ನೇತೃತ್ವದಲ್ಲಿ ನಡೆದಂಥ ಎಲ್ಲಾ ಚಾರಿತ್ರಿಕ ಹೋರಾಟಗಳನ್ನು ಐತಿಹಾಸಿಕ ಮೇ ದಿನಾಚರಣೆಯು ನೆನಪಿಗೆ ತರುತ್ತದೆ. 92 ವರ್ಷಗಳ ಹಿಂದೆ ಮೇ ಒಂದನೇ ತಾರೀಖಿನಂದು, ತಮ್ಮ ಬೇಡಿಕೆಗಳ ಪರವಾಗಿ ಹೋರಾಟ ನಡೆಸಲು 2ನೇ 'ಅಂತರಾಷ್ಟ್ರೀಯ'ವು ವಿಶ್ವದ ಕಾರ್ಮಿಕ ವರ್ಗಕ್ಕೆ ಕರೆಕೊಟ್ಟಿತು. ಅಂದಿನಿಂದ ಈ ದಿನವನ್ನು ವಿಶ್ವದ ಕಾರ್ಮಿಕ ವರ್ಗ ಅಂತರಾಷ್ಟ್ರೀಯ ಐಕ್ಯತಾ ದಿನವನ್ನಾಗಿ ಆಚರಿಸುತ್ತಲಿದೆ.

...ಜ್ಯಶಾಹಿ ರಾಷ್ಟ್ರಗಳು ಶಶ್ತ್ರಾಸ್ತ್ರ ಸಂಗ್ರಹ ಹೆಚ್ಚಿಸುತ್ತ ವಿಶ್ವವನ್ನು ವಿನಾಶದ ಅಂಚಿಗೆ ತಳ್ಳಲು ಯತ್ನಿಸುತ್ತಿವೆ.

ಈ ಸಂದರ್ಭದಲ್ಲಿ ವಿಶ್ವದ ಕಾರ್ಮಿಕರ ವರ್ಗವು, ಯುದ್ಧ ಅಪಾಯದ ವಿರುದ್ಧ ಎಚ್ಚತ್ತು, ಸಮಾಜವಾದಿ ಬಣದ ಬೆಂಗಾವಲಾಗಿ ನಿಂತು ತನ್ನ ಐತಿಹಾಸಿಕ ಕರ್ತವ್ಯ ಪೂರೈಸಬೇಕಾಗಿದೆ.

ನಮ್ಮ ದೇಶದಲ್ಲಿ, ಬಂಡವಾಳಶಾಹಿ-ಭೂಮಾಲೀಕ ಸರಕಾರ ತನ್ನ ದಿವಾಳಿಖೋರ ಆರ್ಥಿಕ ನೀತಿಯಿಂದ ಜನತೆಯನ್ನು ಪ್ರಪಾತಕ್ಕೆ ತಳ್ಳುತ್ತಿದೆ. ಬೆಲೆ ಏರಿಕೆ, ಹಣದುಬ್ಬರ ಹೆಚುತ್ತಿದೆ. 1981 ಡಿಸೆಂಬರ್‌ನಲ್ಲಿ ಬೆಲೆ ಏರಿಕೆ ಸೂಚ್ಯಂಕ 460 (1960-100) ಸಂಸ್ಥೆಗಳನ್ನು ಹೊರಹಾಕಿ, ಗುತ್ತೇದಾರಿ ಕೈಗಾರಿಕೆಗಳನ್ನು ರಾಷ್ಟ್ರೀಕರಿಸುವ ಬದಲು ನಮ್ಮ ಸರಕಾರವು ಸಾಮ್ರಾಜ್ಯಶಾಹಿ ಸಂಘ ಸ್ಥಸ್ಥೆಗಳಿಗೆ ಕುಮ್ಮಕ್ಕು ಕೊಟ್ಟು ತನ್ನ ದಿವಾಳಿಖೋರ ನೀತಿಯನ್ನು ಪ್ರತಿಪಾದಿಸುತ್ತಿದೆ. ಕಾಳಸಂತೆಖೋರರು, ಸಗಟು ವ್ಯಾಪಾರಿಗಳು ಜನತೆಯನ್ನು ಹಿಂಡುತ್ತಿದ್ದಾರೆ. ಅಪಾರ ಲಾಭ ಗಳಿಸುತ್ತಿದ್ದಾರೆ. ಭೂಮಾಲಿಕರು, ಪೋಲೀಸರು ಜೊತೆಗೂಡಿ ದಲಿತರ ರಕ್ತದ ಓಕುಳಿ ಆಡುತ್ತಿದ್ದಾರೆ. ಬಂಡವಾಳಶಾಹಿ ವ್ಯವಸ್ಥೆಯ ದುರಾಡಳಿತ, ಲಂಚಗುಳಿತನ, ಶಿಥಿಲ ರಾಜಕೀಯ ವ್ಯವಸ್ಥೆಯಿಂದಾಗಿ ದೇಶದ ಭದ್ರತೆ, ಪ್ರಜಾಸತ್ತೆ, ಸ್ವಾತಂತ್ರ್ಯ ಅಪಾಯದಲ್ಲಿವೆ. ಕೋಮುವಾದಿ,

ಸಮಾಜವಾದ, ಶಾಂತಿ ಮತ್ತು ಪ್ರಗತಿಗೆ ಬುನಾದಿ

ಕಳೆದ ಒಂದು ವರ್ಷದ ಕಾಲಘಟ್ಟದಲ್ಲಿ ಅಂತರಾಷ್ಟ್ರೀಯ-ರಾಷ್ಟ್ರೀಯ ರಂಗದಲ್ಲಿ ನಡೆದ ಘಟನೆಗಳನ್ನು ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ತರಲಿಚ್ಛಿಸುತ್ತೇವೆ.

ವಿಶ್ವದ ಎಲ್ಲೆಡೆಯೂ ಯುದ್ಧ ಭೀತಿ ಹಾಗೂ ಅಣುಶಕ್ತಿಯಿಂದ ಅಪಾಯ ಹೆಚ್ಚುತ್ತಲಿದೆ. ಅಮೇರಿಕದ ರೇಗನ್ ಆಡಳಿತವು ತನ್ನ ಹಾನಿಕಾರಕ ಯೋಜನೆಗಳನ್ನು ಹಿಂದಿಟ್ಟುಕೊಂಡು, ವಿಶ್ವದ ಇತರರಾಷ್ಟ್ರಗಳಿಗೆ 'ಮಿತಿಯಾದ ಅಣ್ವಸ್ತ್ರ ನೀತಿ'ಯನ್ನು ಬೋಧಿಸುತ್ತಲಿದೆ. ನ್ಯೂಟ್ರಾನ್ ಬಾಂಬ್ ತಯಾರಿಕೆಯಂಥ ಹೇಯ ಯೋಜನೆಯ ಮೇಲೆ ಕೋಟ್ಯಾಂತರ ಡಾಲರ್ ಹಣವನ್ನು ಬಂಡವಾಳವನ್ನಾಗಿ ಹೂಡಿ ಮಾನವ ಕುಲಕ್ಕೇ ಸವಾಲೆಸೆದು ನಿಂತಿದೆ.

ಸಮಾಜವಾದಿ ರಾಷ್ಟ್ರಗಳು, ಜನತೆಯ ಜೀವನ ಮಟ್ಟವನ್ನು ಉತ್ತಮಗೊಳಿಸುವಲ್ಲಿ, ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿರುವಾಗ ಸಾಮ್ರಾ... ಆಗಿತ್ತು. ಈ ಸಂದರ್ಭದ 1300ಕೋಟಿ ರೂಗಳಷ್ಟು ಹೊರೆಯನ್ನು ಮತ್ತೆ ಜನತೆಯ ತಲೆಯ ಮೇಲೆ ಹೊರಿಸಲಾಗಿದೆ. ಕಾರ್ಮಿಕ ವರ್ಗದ ಮೇಲಂತೂ ಸದಾ ಪ್ರಹಾರ ನಡೆದೇ ಇದೆ. ವೇತನ ಸ್ತಂಭನ, ತುಟ್ಟಿ ಭತ್ತೆ ತಡೆಹಿಡಿಯುವುದು, ಹೋರಾಟಗಳನ್ನು ಹತ್ತಿಕ್ಕಲು ಎನ್.ಎಸ್.ಎ. ಮತ್ತು ಇ.ಎಸ್.ಎಂ.ಎ. ಬಳಕೆ ಸಾಗಿದೆ.

ದೇಶದ ಆರ್ಥಿಕ ನೀತಿ ವಿದೇಶ ಸಾಲವನ್ನೇ ಅವಲಂಬಿಸಿ ನಿಂತಿದೆ. ಇತ್ತೀಚೆಗೆ ತಾನೇ ದೇಶದ ಘನತೆ, ಸಾರ್ವಭೌಮತ್ವಕ್ಕೆ ದಕ್ಕೆ ತರುವ ಷರತ್ತುಗಳೊಂದಿಗೆ ಐ. ಎಂ. ಎಫ್. ನಿಂದ ಸಾಲ ಪಡೆಯಲಾಗಿದೆ. ಈ ಸಾಲದ ದೆಸೆಯಿಂದ ಸರಕು ಸಾಮಗ್ರಿಗಳನ್ನು ಅತ್ಯಂತ ಕಡಿಮೆ ಬೆಲೆಗೆ ವಿದೇಶಗಳಿಗೆ ರಫ್ತು ಮಾಡಬೇಕಾಗಿ ಬಂದಿದೆ. ಐ. ಎಂ. ಎಫ್. ದೊರೆಗಳನ್ನು ತೃಪ್ತಿಪಡಿಸಲು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ರಿಯಾಯಿತಿ ಕೊಡಲಾಗುತ್ತಿದೆ. ಬಹುರಾಷ್ಟ್ರೀಯ ...

ವಿಚ್ಛಿದ್ರಕಾರಿ ಹಾಗೂ ಪ್ರತ್ಯೇಕತಾವಾದಿ ಶಕ್ತಿಗಳು ತಮ್ಮ ಹೆಡೆಯೆತ್ತುತ್ತಿವೆ.

ಸರ್ವಾಧಿಕಾರಿ ಕಾಂಗ್ರೆಸ್ ಸರಕಾರವು ಜನತೆಯ ಹೋರಾಟಗಳನ್ನು ನಿರ್ಧಯವಾಗಿ ಹತ್ತಿಕ್ಕುತ್ತಿದೆ. ಜಾತಿ-ಚೂರಿ ರಾಜಕೀಯವನ್ನು ಪ್ರೋತ್ಸಾಹಿಸುತ್ತಿದೆ. ಇಂಥ ಪರಿಸ್ಥಿತಿಯಲ್ಲೂ ಸರ್ವಾಧಿಕಾರದ ವಿರುದ್ಧ, ಸರಕಾರದ ಕಾರ್ಮಿಕನೀತಿಯ ವಿರುದ್ಧ, ಅನೇಕಧಿರೋದಾತ್ತ ಹೋರಾಟ ನಡೆಸಿದ ಕಾರ್ಮಿಕ ವರ್ಗವನ್ನು ನಾವು ಈ ಮೇ ದಿನದ ಸಂದರ್ಭ ಅಭಿನಂದಿಸುತ್ತಿದ್ದೇವೆ.

ಕಳೆದ ವರ್ಷದ ಅವಧಿಯಲ್ಲಿ ಮಹಾರಾಷ್ಟ್ರ, ಯು. ಪಿ., ಬಿಹಾರ್, ಹರ್ಯಾಣಾ ಮತ್ತು ಕರ್ನಾಟಕ ಮತ್ತಿತರ ರಾಜ್ಯಗಳಲ್ಲಿ ಅನೇಕ ಧೀರ್ಘ ಹೋರಾಟ ನಡೆದಿವೆ. ಬೆಲೆಏರಿಕೆ, ಕಾರ್ಮಿಕ ವಿರೋಧಿ ನೀತಿಯನ್ನು ಎದುರಿಸಲು, ರೈತರ, ಕೃಷಿಕೂಲಿಕಾರರ ಮತ್ತು ಕಾರ್ಮಿಕರ ಬೇಡಿಕೆಗಳ ಈಡೇರಿಕೆಗಾಗಿ

(8ನೇ ಪುಟ ನೋಡಿ)

ಫಾಲಿಫೈಬರ್ಸ್ ಮತ್ತು ಮೈಸೂರು ಕಿರ್ಲೋಸ್ಕರ್ ಕಾರ್ಮಿಕ ಸಂಘಗಳ ಚುನಾವಣೆ

ಹರಿಹರದ ಫಾಲಿಫೈಬರ್ಸ್ ಕಾರ್ಮಿಕ ಸಂಘದ ಚುನಾವಣೆಯಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಕಾಂ| ವಿ.ಜೆ.ಕೆ. ನಾಯರ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಕಾಂ|| ವಿ.ಜೆ.ಕೆ.ಯವರ ವಿರುದ್ಧ ಸ್ಪರ್ಧಿಸಿದ್ದ ಎ.ಐ.ಟಿ.ಯು.ಸಿ. ಯ ಅಭ್ಯರ್ಥಿಗೆ 491 ಮತಗಳೂ, ಕಾಂ|| ವಿ.ಜೆ.ಕೆ ಯವರಿಗೆ 622 ಮತಗಳೂ ದೊರೆತಿವೆ. ಕಳೆದ ಸಲ ಈ ಕಾರ್ಮಿಕ ಸಂಘಕ್ಕೆ ಎ. ಐ. ಟಿ. ಯು. ಸಿ. ನಾಯಕ ಪಂಪಾಪತಿಯವರು ಅಧ್ಯಕ್ಷರಾಗಿದ್ದರು.

ದಿನಾಂಕ 30 ರಂದು ನಡೆದ ಮೈಸೂರು ಕಿರ್ಲೋಸ್ಕರ್ ಕಾರ್ಮಿಕ ಸಂಘದ ಚುನಾವಣೆಯಲ್ಲೂ ಕಾಂ|| ವಿ. ಜೆ. ಕೆ. ನಾಯರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಕಾಂ|| ಎನ್. ಜೆ. ಪಠಾಣ, ಪ್ರಧಾನ ಕಾರ್ಯಯಾಗಿ ಕಾಂ|| ಆರ್. ಬಿ. ಅಂಗಡಿ, ಸಹ ಕಾರ್ಯದರ್ಶಿಗಳಾಗಿ ಕಾಂ|| ನಾರಾಯಣ ಸಾ ಮತ್ತು ಮಾಗಳೂರ ಮತ್ತು ಖಜಾಂಚಿಯಾಗಿ ಕಾಂ|| ಗುಡ್ಡಪ್ಪ ಇವರುಗಳೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹರಿಹರದ ಫಾಲಿಫೈಬರ್ಸ್ ಮತ್ತು ಮೈಸೂರು ಕಿರ್ಲೋಸ್ಕರ್ ಕಾರ್ಮಿಕ ಬಾಂಧವರನ್ನು ಐಕ್ಯರಂಗ ಅಭಿನಂದಿಸುತ್ತದೆ.

ಗಂಗಾವತಿ

ದ. ಸಂ. ಸ. ನಾಯಕನಿಗೆ ಹೊಡೆತ

ದಲಿತ ಸಂಘರ್ಷ ಸಮಿತಿಯ ಗಂಗಾವತಿ ಘಟಕದ ಸಂಚಾಲಕ ಕಾಂ॥ ಭಾಗ್ಯವಂತರನ್ನು ಟಿ.ಡಿ.ಬಿ. ಸದಸ್ಯ(ಕಾಂಗ್ರೆ) ದುರುಗಪ್ಪ ಎಂಬುವನು ಚಪ್ಪಲಿಯಿಂದ ಹೊಡೆದಿರುವ ವರದಿಯಾಗಿದೆ· ಅದೂ ಬಿ.ಡಿ.ಓ.ರ ಸಮ್ಮುಖದಲ್ಲಿ!

ಕಾಂ॥ ಭಾಗ್ಯವಂತ ಅವರು ಚಪ್ಪಲಿಯಿಂದ ಹೊಡೆಸಿಕೊಳ್ಳುವಂಥ ತಪ್ಪು ಮಾಡಿದ್ದೇನು ಗೊತ್ತೆ ? :

ಗಂಗಾವತಿ ತಾಲ್ಲೂಕಿನ ಕಾರಟಗಿ ಗ್ರಾಮದ ಸುಮಾರು 12 ದಲಿತ ಕುಟುಂಬಗಳು ಕಳೆದ 30 ವರ್ಷಗಳಿಂದ ಮುಖ್ಯರಸ್ತೆಯ ಪಕ್ಕದ ಪಂಚಾಯತ ಜಾಗದಲ್ಲಿ ವಾಸಿಸುತ್ತಾ ಬಂದಿದ್ದಾರೆ. ಇದು ನೀರಾವರಿ ಪ್ರದೇಶದ ದೊಡ್ಡ ಗ್ರಾಮವಾದ್ದರಿಂದ ದಿನೇ ದಿನೇ ವ್ಯಾಪಾರ ವ್ಯವಹಾರಗಳಲ್ಲಿ ಮುಂದುವರೆಯುತ್ತಿದೆ. ಮುಖ್ಯರಸ್ತೆಯ ಎರಡೂ ಕಡೆ ಅಂಗಡಿಯ ಸಾಲು ಮಳಿಗೆಗಳಿವೆ. ದಲಿತರ ಗುಡಿಸಲುಗಳಿರುವುದು ಈ ಸಾಲುಗಳಲ್ಲೇ, ಹಿಗಾಗಿ ಈ ಗುಡಿಸಲುಗಳಿರುವ ಸ್ಥಳಕ್ಕೆ ಹೆಚ್ಚಿನ ಬೆಲೆ ಬಂದಿರುತ್ತದೆ.

ಕಾರಣ ಆಸೆಬುರುಕ ಪಂಚಾಯತ್ ಛೇರ್ಮನ್ ಮತ್ತು ಟಿ.ಡಿ.ಬಿ. ಸದಸ್ಯರು ಈ ಸ್ಥಳವನ್ನು ಬೇರೆಯವರಿಗೆ ವಿಲೇವಾರಿ ಮಾಡುವ ಮಸಲತ್ತು ನಡೆಸಿದರು. ಎಲ್ಲ ಭ್ರಷ್ಟರೂ ಸೇರಿ ಬಿ.ಡಿ.ಓ.ರನ್ನು ಬುಟ್ಟಿಗೆ ಹಾಕಿಕೊಂಡು ಏನೇನೋ ಸಬೂಬು ಹೇಳಿ ದಲಿತರ ಗುಡಿಸಲುಗಳನ್ನು ಕೀಳುವಂತೆ 1981 ರ ನವಂಬರ್‌ನಲ್ಲಿ ನೋಟೀಸ್ ಹೊರಡಿಸಿದರು.

ಕಂಗಾಲಾದ ದಲಿತರು ಈ ಕುರಿತು ದ. ಸಂ. ಸ. ಗಂಗಾವತಿ ಘಟಕಕ್ಕೆ ದೂರು ಕೊಟ್ಟರು. ದ.ಸಂ.ಸ. ಸಂಚಾಲಕರು ಮಧ್ಯೆ ಪ್ರವೇಶಿಸಿ ಗುಡಿಸಲುಗಳನ್ನು ಬೇರೆಯಾವುದಾದರೂ ಸಮೀಪದ ಸ್ಥಳಕ್ಕೆ ಸ್ಥಳಾಂತರಿಸುವಂತೆ ವಿನಂತಿಸಿದರು. (ಗುಡಿಸಲುಗಳನ್ನು ಊರಿನಿಂದ ಎರಡು ಮೈಲಿ ದೂರಕ್ಕೆ ವರ್ಗಾಯಿಸುವ ಹಂಚಿಕೆಯಿತ್ತು)

ಈ ಮನವಿಗೆ ನಾಲ್ಕು ತಿಂಗಳು ಕಳೆದರೂ ಏನೂ ಪ್ರತಿಕ್ರಿಯೆ ಬರಲಿಲ್ಲ. 23-4-82 ರಂದು ದುರುಗಪ್ಪ ಮತ್ತಿತರರ ನೇತೃತ್ವದಲ್ಲಿ ಗುಂಪೊಂದು ಬಂದು ಗುಡಿಸಲುಗಳನ್ನು ನೆಲಸಮ ಮಾಡತೊಡಗಿತು. ಈ ಗುಂಪಿನೊಡನೆ ಬಿ.ಡಿ.ಓ. ಅವರೂ ಇದ್ದರು. ಸುದ್ದಿ ತಿಳಿದು ಧಾವಿಸಿ ಬಂದ ಕಾಂ॥ ಭಾಗ್ಯವಂತರು ಈ ರೀತಿ ಏಕಾಏಕಿ ಗುಡಿಸಲು ಕೀಳುವುದು ಯಾವ ನ್ಯಾಯ ಎಂದು ಬಿ. ಡಿ. ಓ. ರನ್ನು ಪ್ರಶ್ನಿಸಿದರು. ಅಂಗಡಿಯೊಂದರ ಫ್ಯಾನ್ ಕೆಳಗೆ ಕುಳಿತಿದ್ದ (ಮಹಾಕಾರ್ಯದ ಮೇಲ್ವಿಚಾರಣೆ ವಹಿಸಿ) ಬಿ.ಡಿ.ಓ. 'ಈ ಕುರಿತು ಎ.ಸಿ. ಯವರನ್ನು ಕೇಳು' ಎಂದುತ್ತರಿಸಿದ ಕ್ಷಣ!

ತಕ್ಷಣ ಗೂಂಡಾ ಗುಂಪು ಕಾಂ॥ ಭಾಗ್ಯವಂತರಿದ್ದಲ್ಲಿ ಆಗಮಿಸಿತು. ಗುಂಪಿನ ಮುಖಂಡ ದುರುಗಪ್ಪನು ಮುಂದೆ ಬಂದು 'ಲೀಡರ್ಕಿ ಮಾಡಲಿಕ್ಕೆ ಬಂದೀ ಏನ್ಲೇ ? ಇನ್ನೊಮ್ಮೆ ಇಲ್ಲಿಗೆ ಬಂದರೆ ಕಾಲು ಮುರಿತ್ತೇವೆ.' ಎಂದಬ್ಬರಿಸಿ ಚಪ್ಪಲಿಯಿಂದ ಕಾಂ॥ ಭಾಗ್ಯವಂತ ಅವರನ್ನು ಹೊಡೆದನು.

ಒಬ್ಬರೇ ಅಸಾಯಕರಾಗಿದ್ದ ಕಾಂ॥ ಭಾಗ್ಯವಂತ ಅವರು ಉಕ್ಕಿದ ರೋಷವನ್ನು ನುಂಗಿಕೊಂಡು ಗಂಗಾವತಿಗೆ ಬಂದು ಈ ಹಲ್ಲೆ ಪ್ರಕರಣದ ಕುರಿತು ಪೋಲೀಸರಿಗೆ ದೂರು ಸಲ್ಲಿಸಿದ್ದಾರೆ. ಅಲ್ಲದೇ ಸೂಕ್ತ ವಿಚಾರಣೆ ಕೈಗೊಳ್ಳಬೇಕೆಂದು ಎ. ಸಿ. ಮತ್ತು ಡಿ. ಸಿ. ಯವರಿಗೂ ದೂರು ಕೊಟ್ಟಿದ್ದಾರೆ.

ಈ ಹಲ್ಲೆಯನ್ನು ಪ್ರಾಂತ ರೈತ ಸಂಘದ ಗಂಗಾವತಿ ಘಟಕವು ಮತ್ತು ಸ್ಥಳೀಯ ಎಸ್. ಎಫ್. ಐ. ಘಟಕವು ತೀವ್ರವಾಗಿ ಖಂಡಿಸಿವೆ.

ವಿಪರ್ಯಾಸವೆಂದರೆ ಈ ದುರುಗಪ್ಪ ಮತ್ತು ಕಂಪನಿಯವರ ಪಕ್ಷವು ಇತ್ತೀಚೆಗೆ ತಾನೇ ಡಾ॥ ಅಂಬೇಡ್ಕರ್‌ರ (ಡಿ. 14) ಜನ್ಮದಿನೋತ್ಸವವನ್ನು ಆಚರಿಸಿತ್ತು.

ಕಾಂಗ್ರೆಸ್ ಆಡಳಿತದಲ್ಲಿ ದಲಿತರ ರಕ್ತ ಭೂಮಿಯನ್ನು ತೋಯ್ಯಿಸದ ಒಂದೇ ಒಂದು ದಿನವೂ ಇಲ್ಲ. ಬಿಹಾರ, ಮಧ್ಯಪ್ರದೇಶ, ಉತ್ತರ ಪ್ರದೇಶಗಳಲ್ಲಿ ಭೂ ಮಾಲೀಕರು ದಲಿತರ ರಕ್ತದಿಂದ ನಡೆಸುತ್ತಿರುವ ರಾಜಕೀಯ ಯಾಗಗಳು ಪುರಾತನ ವೈದಿಕ ಯಾಗಗಳನ್ನು ನಾಚಿಸಿವೆ. ಈ ಯಾಗಗಳಿಗೆ ಭೂ ಮಾಲೀಕ ಹಾಗೂ ಬಂಡವಾಳಶಾಹಿ ಪ್ರತಿನಿಧಿಯಾದ ಸರ್ವಾಧಿಕಾರಿ ಇಂದಿರಾಗಾಂಧಿ ಮೌನದಿಂದಿರುವ ಮೂಲಕ ಕುಮ್ಮಕ್ಕು ಕೊಡುತ್ತಿದ್ದಾರೆ.

ದಲಿತರು ಎಚ್ಚೆತ್ತು, ತಾಂಡವಾಡುತ್ತಿರುವ ಕ್ರೂರ ಹಿಂಸೆ, ಅಮಾನವೀಯ ಪರಿಸ್ಥಿತಿಯ ವಿರುದ್ಧ ಸಿಡಿದೇಳಬೇಕು. ಆಗ ಮಾತ್ರ ಅನ್ಯಾಯ, ದೌರ್ಜನ್ಯ ತಡೆಗಟ್ಟಲು ಸಾಧ್ಯ.

—

ಶಿವಮೊಗ್ಗ

ಹೋರಾಟಕ್ಕೆ ಬೆಂಬಲ

ಸಿ. ಪಿ. ಐ. (ಎಂ) ಶಿವಮೊಗ್ಗ ನಗರ ಸಮಿತಿಯು 23-4-82 ರಂದು ಸಭೆ ಸೇರಿ ಜಿಲ್ಲೆಯಲ್ಲಿ ನಡೆಯುತ್ತಿರುವ ರೈತ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದೆ. ಸಭೆಯ ಅಧ್ಯಕ್ಷತೆಯನ್ನು ಕಾಂ। ತಿರುಕಪ್ಪ ವಹಿಸಿದ್ದರು. ಸಭೆ ಕೈಗೊಂಡ ತೀರ್ಮಾನಗಳ ಸಂಕ್ಷಿಪ್ತ ವಿವರ ಇಂತಿದೆ.

1. ರೈತರ ಬೇಡಿಕೆಗಳು ನ್ಯಾಯ ಸಮ್ಮತವಾಗಿದ್ದು, ಸರ್ಕಾರವು ಪೋಲೀಸ್ ನೆರವಿನಿಂದ ಚಳುವಳಿಯನ್ನು ಹತ್ತಿಕ್ಕಲು ಯತ್ನಿಸಿದ್ದು ಖಂಡನೀಯ. ಕೂಡಲೇ ಸರ್ಕಾರವು ರೈತರ ಬೇಡಿಕೆಗಳನ್ನು ಈಡೇರಿಸಬೇಕು.

2. ಗೋಕಾಕ್‌ವರದಿಯ ಕುರಿತು ಸರಕಾರ ತಳೆದ ನಿಲುವು ಸೂಕ್ತವಾಗಿದ್ದು, ಕನ್ನಡವನ್ನು ಆಡಳಿತ ಭಾಷೆಯಾಗುವಂತೆ ಮಾಡುವಲ್ಲಿ ಸರಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ಚಳುವಳಿಯಲ್ಲಿ ಕೋಮು ಶಕ್ತಿಗಳು ತಲೆ ಎತ್ತುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸಿರುವ ಸಭೆ ಜನತೆ ಇಂಥ ವಿಚ್ಛಿದ್ರಕಾರಿ ಶಕ್ತಿಗಳ ಬಗ್ಗೆ ಜಾಗರೂಕರಾಗಿರಬೇಕು ಎಂದು ತಿಳಿಸಿದೆ.

3. ಜಿಲ್ಲಾ ಕಾರ್ಮಿಕಾಧಿಕಾರಿಗಳಿಲ್ಲದೇ 2-3 ತಿಂಗಳುಗಳಿಂದ ಕಾರ್ಮಿಕರ ಸಮಸ್ಯೆಗಳು ಬಗೆ ಹರಿಯದೇ ಹಾಗೇ ಉಳಿದಿವೆ. ಆದ್ದರಿಂದ ಕೂಡಲೇ ಜಿಲ್ಲಾ ಕಾರ್ಮಿಕಾಧಿಕಾರಿಯನ್ನು ನೇಮಿಸಬೇಕು.

—

ಮಂಗಳೂರು

ಅಬಕಾರಿ ಪೋಲೀಸ್ ದೌರ್ಜನ್ಯದ ಖಂಡನೆ

ಬೀಡಿ ಕೆಲಸಗಾರರ ಸಂಘದ ಪ್ರಾದೇಶಿಕ ಸಮಿತಿಯ ಕಾರ್ಯದರ್ಶಿ, ಘಟಕದ ಸಿ. ಪಿ. ಐ.(ಎಂ) ಗೋರಿಗುಡ್ಡೆ ಸದಸ್ಯರೂ ಆದ ಕಾಂ।ಲೂಯಿಸ್ ಅರೋಸರ ಮೇಲೆ ಅಬಕಾರಿ ಪೋಲೀಸ್ ಇನಸ್ಪೆಕ್ಟರುಗಳಾದ ಸ್ಟೀವನ್ ಮತ್ತು ಸಂಜೀವ ಪೂಜಾರಿ ಮತ್ತವರ ಸಿಬ್ಬಂಧಿಗಳು ಸೇರಿ 15-4-82 ರಂದು ದಾಳಿಮಾಡಿದ್ದಾರೆ. ಕಾಂ।ಅರೋಸರ ಮನೆಗೆ ನುಗ್ಗಿ ಅವರನ್ನು ಅಮಾನುಷವಾಗಿ ಥಳಿಸಲಾಗಿದೆ. ಅದೂ ಯಾವುದೇ ಕಾರಣವಿಲ್ಲವೇ. ಈಗ ಕಾಂ।ಲೂಯಿಸ್ ಆಸ್ಪತ್ರೆಯಲ್ಲಿದ್ದಾರೆ

22-4-82 ರಂದು ಸಿ. ಪಿ. ಎಂ. (ಎಂ) ಗೋರಿಗುಡ್ಡೆ ಘಟಕದ ಸಭೆ ಸೇರಿ ಕಾಂ।ಲೂಯಿಸ್‌ರ ಮೇಲೆ ನಡೆದ ದೌರ್ಜನ್ಯವನ್ನು ತೀವ್ರವಾಗಿ ಖಂಡಿಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸೂಕ್ತಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ.

—

ಜನತೆಯಿಂದ ಮತ್ತು ಜನತೆಯು ಸಕ್ರೀಯ ಪಾತ್ರವಹಿಸುವದರಿಂದ ಮಾತ್ರ ಚರಿತ್ರೆಯ ನಿರ್ಮಾಣ ಸಾಧ್ಯ.

—ಮಾವೋ

ಸುಳ್ಯ : ಅಂಬೇಡ್ಕರ್ ಜನ್ಮದಿನಾಚರಣೆ ಅಂಗವಾಗಿ ವಿಚಾರಗೋಷ್ಠಿ

18-4-82ರಂದು ಸುಳ್ಯದ ರೋಟರಿ ಕ್ಲಬ್ ಹಾಲ್‌ನಲ್ಲಿ ದ ಕ. ಜಿಲ್ಲಾ ದ. ಸಂ. ಸ. ಘಟಕದ ಆಶ್ರಯದಲ್ಲಿ ಡಾ॥ ಅಂಬೇಡ್ಕರರ 91ನೇ ಜನ್ಮದಿನಾಚರಣೆಯ ಅಂಗವಾಗಿ ವಿಚಾರ ಗೋಷ್ಠಿಯೊಂದು ನಡೆಯಿತು.

ಗೋಷ್ಠಿಯ ಉದ್ಘಾಟನೆಯನ್ನು ಮಂಗಳಗಂಗೋತ್ರಿಯ ಅರ್ಥ ಶಾಸ್ತ್ರ ಪ್ರಾಧ್ಯಾಪಕ ಕಾಂ। ಕೆ. ಸಿ. ಬಸವರಾಜ್ ನೆರವೇರಿಸಿದರು. ಶ್ರೀ ಬಸವರಾಜ್ ಮಾತನಾಡುತ್ತ, ಸರ್ವಮಾನವ ಸಮಾನತೆಗಾಗಿ ಹೋರಾಡಿದ ಅಂಬೇಡ್ಕರ್ ಅವರು ಬಯಸಿದ್ದ ಹೊಸ ಸಮಾಜ ನಿರ್ಮಾಣದ ಹೋರಾಟಕ್ಕೆ ದಲಿತರು ಮುಂದೆ ಬರಬೇಕೆಂದರು.

ಜಿ. ಎಸ್. ಶೇಖರ್ ಅವರು 'ಅಂಬೇಡ್ಕರರ ವಿಚಾರ ಧಾರೆ' ಎಂಬ ವಿಷಯದ ಕುರಿತು ಪ್ರಭಂದ ಮಂಡಿಸಿದರು. ದಲಿತರು ಅಂಬೇಡ್ಕರರನ್ನು ದೇವರೆಂದು ಪೂಜಿಸುವ, ಗುಡಿಕಟ್ಟಿ ಆರಾಧಿಸುವ ಭ್ರಮೆಯನ್ನು ತೊರೆಯಬೇಕು. 'ವೈಚಾರಿಕ ನೆಲೆಯಲ್ಲಿ ದಲಿತರು ಎಚ್ಚರಗೊಳ್ಳುವದರಲ್ಲಿಯೇ ಅವರ ವಿಮೋಚನೆ ಅಡಗಿದೆ' ಎಂಬ ಅಂಬೇಡ್ಕರರ ಮಾತನ್ನು ಮನನ ಮಾಡಿಕೊಳ್ಳಬೇಕಾದುದು ಅತ್ಯಂತ ಅವಶ್ಯ ಎಂದು ಜಿ. ಎಸ್. ಶೇಖರ್ ತಿಳಿಸಿದರು.

'ಮಹಿಳೆ ಮತ್ತು ಮೂಢ ನಂಬಿಕೆ' ಎಂಬ ವಿಷಯದ ಕುರಿತು ಎ. ಸೀತಾ ಅವರು ಪ್ರಭಂದ ಮಂಡಿಸಿದರು. ಹೆಣ್ಣನ್ನು, ಅಬಲೆಯೆಂಬ ಹಣೆಪಟ್ಟಿ ಕಟ್ಟಿ ಆಕೆಯ ವ್ಯಕ್ತಿತ್ವದ ಬೆಳವಣಿಗೆಯನ್ನೇ ವ್ಯವಸ್ಥೆಯು ಕುಂಠಿತಗೊಳಿಸಿದೆ. ಎಲ್ಲಾ ಹೆಣ್ಣು ಮಕ್ಕಳಿಗೆ ಕಡ್ಡಾಯ ವೈಜ್ಞಾನಿಕ ಪಾಠಗಳನ್ನು ಕಲಿಸಬೇಕು; ಮಾತ್ರವಲ್ಲ ವೈಚಾರಿಕ ನಿಲುವುಗಳ ಮೂಲಕ ಹೆಣ್ಣು ತನ್ನ ಸ್ಥಾನಮಾನಗಳಿಸಬೇಕಾಗಿದೆ ಎಂದು ಕಾಂ। ಸೀತಾ ಅಭಿಪ್ರಾಯಪಟ್ಟರು.

ವಿಚಾರಗೋಷ್ಠಿಯ ಅಧ್ಯಕ್ಷತೆಯನ್ನು ಖ್ಯಾತ ಬಂಡಾಯ ಸಾಹಿತಿ ಮಹಮ್ಮದ್ ಕುಂಞ ವಹಿಸಿದ್ದರು. ಅವರು ಮಾತನಾಡುತ್ತಾ, ಜನಪರ ಸಂಸ್ಕೃತಿಯನ್ನು ಹುಟ್ಟು ಹಾಕಲು ನಡೆಯುವ ಹೋರಾಟದಲ್ಲಿ ದಲಿತರು ಮುಂಚೂಣಿಗೆ ಬರಬೇಕು ಎಂದರು. ಆರಂಭದಲ್ಲಿ ಬಿ. ರಾಮಕೃಷ್ಣ ಸ್ವಾಗತಿಸಿದರು.

ಈ ಕಾರ್ಯಕ್ರಮದ ಅಂಗವಾಗಿ ಸಂಜೆ ಬಹಿರಂಗ ಸಭೆಯು ನಡೆಯಿತು. ಅಧ್ಯಕ್ಷತೆಯನ್ನು ವಾಸುದೇವ್ ಉಚ್ಚಿಲ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಕಾಂ। ಪರಮೇಶ್ವರ ನಂಬೀಶನ್, ಮೋಹನ್ ಮತ್ತು ಕಾಂ। ಪಿ. ಕೆ. ಮೂಸ ಆಗಮಿಸಿದ್ದರು.

ಕೊನೆಯಲ್ಲಿ ಬಿ. ರಾಮಕೃಷ್ಣ ರಚಿಸಿದ 'ಕಲಿಯುಗದ ಮಹಿಮೆ' ಎಂಬ ಕ್ರಾಂತಿಕಾರಿ ಯಕ್ಷಗಾನವನ್ನು ಅಭಿನಯಿಸಲಾಯಿತು.

—

ಓರಿಯಂಟಲ್ ಟೈಲ್ ಫ್ಯಾಕ್ಟರಿ ಕಾರ್ಮಿಕರ

ವಾರ್ಷಿಕ ಮಹಾಸಭೆ

24-4-82 ರಂದು ಮಂಗಳೂರಿನ ಎಸ್. ಕೆ. ಟೈಲ್ ವರ್ಕರ್ಸ್ ಯೂನಿಯನ್ನಿನ ಆಫೀಸಿನಲ್ಲಿ ಓರಿಯಂಟಲ್ ಟೈಲ್ ಫ್ಯಾಕ್ಟರಿ ಕಾರ್ಮಿಕರ ವಾರ್ಷಿಕ ಮಹಾಸಭೆ ನಡೆಯಿತು. ಕಾಂ। ಗಿರಿಯಪ್ಪ ಅಧ್ಯಕ್ಷತೆ ವಹಿಸಿದ್ದರು.

ಆರಂಭದಲ್ಲಿ ಕಾಂ॥ ಜಯಂತರು ಬಂದಿದ್ದ ಕಾರ್ಮಿಕರನ್ನು ಸ್ವಾಗತಿಸಿ, ವರದಿಯನ್ನು ಮಂಡಿಸಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಎಸ್. ಕೆ. ಟೈಲ್ಸ್ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿ ಕಾಂ॥ ಕೊರಗಪ್ಪ ರೈಯವರು ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದರು.

ಕೊನೆಯಲ್ಲಿ ಮೂರು ಮಂದಿ ಮಹಿಳಾ ಸದಸ್ಯರನ್ನೊಳಗೊಂಡ 27 ಮಂದಿಯ ಹೊಸ ಫ್ಯಾಕ್ಟರಿ ಸಮಿತಿಯನ್ನು ರಚಿಸಲಾಯಿತು.

●

ಆಳಪೆ ಪ್ರದೇಶ

ಬೀಡಿ ಲೇಬರ್ ಯೂನಿಯನ್ನಿನ ವಾರ್ಷಿಕ ಸಭೆ

4-4-82 ರಂದು ಆಳಪೆ (ದ. ಕ. ಜಿಲ್ಲೆ)ಪ್ರದೇಶ ಬೀಡಿ ಲೇಬರ್ ಯೂನಿಯನ್ನಿನ ವಾರ್ಷಿಕ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಪೂವಪ್ಪಸಾಲಿಯಾನ್ ವಹಿಸಿದ್ದರು.

ಪ್ರಾರಂಭದಲ್ಲಿ ಹಿರಿಯ ಕಾರ್ಮಿಕ ಮುಂದಾಳು ಕೆ. ತಿಮ್ಮಪ್ಪನವರು ವಿವಿಧ ಪ್ರದೇಶದಿಂದ ಬಂದ ಬೀಡಿ ಮಜೂರರನ್ನು ಸ್ವಾಗತಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಜೆ. ಬಾಲಕೃಷ್ಣ ಶೆಟ್ಟಿಯವರು ಚಟುವಟಿಕೆಯ ಕುರಿತು ವರದಿ ಸಲ್ಲಿಸಿದರು. ಕೆ. ಮಾರಪ್ಪನವರು ಲೆಕ್ಕಪತ್ರದ ವರದಿ ಸಲ್ಲಿಸಿದರು.

ಮುಖ್ಯ ಅಥಿತಿಯಾಗಿ ಜಿಲ್ಲಾ ಸಿ. ಐ. ಟಿ. ಯು. ಜೊತೆ ಕಾರ್ಯದರ್ಶಿ ಕಾಂ॥ ಯು. ಬಿ. ಲೋಕಯ್ಯ ಮತ್ತು ರಾಜ್ಯ ಸಿ. ಐ. ಟಿ. ಯು. ಕಾರ್ಯದರ್ಶಿ ಕಾಂ॥ ಬಿ.ಮಾಧವ ಆಗಮಿಸಿದ್ದರು. ●

ಎರಡು ನಿಮಿಷ

ಬ್ರೂನೋ ಆಪಿಟ್ಸ್

ಅನುವಾದ :

ಎಚ್. ಎಸ್. ರಾಘವೇಂದ್ರರಾವ್

"ತೋಳಗಳ ನಡುವೆ ಸಿಲುಕಿದ ಅಸಹಾಯಕರು" ವಿಶ್ವ ವಿಖ್ಯಾತ ಕಾದಂಬರಿ. ಇದರ ಕರ್ತೃ ಬ್ರೂನೋ ಆಪಿಟ್ಸ್. ಜನಿಸಿದ್ದು ೧೯೦೦ ರಲ್ಲಿ. ಹಿಟ್ಲರನ ಕೂಡು ದೊಡ್ಡಿಯಲ್ಲಿ ಹಿಂಸೆಯನ್ನು ಅನುಭವಿಸಿದ ಆಪಿಟ್ಸ್ ಬರೆದ ಕಥೆ "ಎರಡು ನಿಮಿಷ"ವನ್ನು ವಿಶ್ವಕಥಾಕೋಶದ 18ನೇ ಸಂಪುಟ 'ಬಾಲಮೇಧಾವಿ'ಯಿಂದ ಆಯ್ದುಕೊಳ್ಳಲಾಗಿದೆ.

ಅನುಮತಿ ಕೊಟ್ಟ ನವಕರ್ನಾಟಕ ಪ್ರಕಾಶನದವರಿಗೆ ನಾವು ಋಣಿ.

ಕ್ರಿಸ್‌ಮಸ್ ಹಬ್ಬದ ಮುನ್ನಾದಿನ. ನಗರದ ಸೆರೆಮನೆಯ ತುಂಬಾ ಗಂಭೀರ ಮೌನ. ನಿರಂತರವಾದ ಸೆರೆಮನೆಯ ಸದ್ದುಗಳಿಗೆ ಇಂದು ಪೂರ್ಣ ವಿರಾಮ. ಕೋಣೆಗಳಿಗೆ ಬೀಗ ಹಾಕುವ, ತೆಗೆಯುವ ಖಣಖಣ ಶಬ್ದ; ಕಾವಲುಗಾರರ ಕಿವಿಗಡಚಿಕ್ಕುವ ಕೋಪ ತುಂಬಿದ ಕೂಗು; ಸಂಕೋಲೆಗಳಿಂದ ಬಂಧಿತರಾದ ಕೈದಿಗಳಿಗೆ ಕಬ್ಬಿಣದ ಮೆಟ್ಟಲುಗಳನ್ನು ಹತ್ತಿ ಇಳಿಯುವ ಗದ್ದಲ ಎಲ್ಲ ಎಲ್ಲ ನಿಂತಿದ್ದವು, ಇದೆಲ್ಲ ಹೋಗಲಿ, ಸೆರೆ ಆಳುಗಳನ್ನು ಅಡ್ಡ ವಿಚಾರಣೆಗೋಸ್ಕರ ಹೊರಗೆ ಕರೆಯುವಗಂಟೆಯ ಧ್ವನಿ -ವೈಮನಸ್ಸುಗಳ ಆಳವನ್ನೇ ಪ್ರವೇಶಿಸಿ ಬಿಡುವ, ಭಯದ ಬೀಜಗಳನ್ನು ಬಿತ್ತುವ ಆ ರಾಕ್ಷಸ ಧ್ವನಿ ಇವು ಯಾವುದೂ ಇರಲಿಲ್ಲ.

ಮಹಡಿಯ ಕೆಳಗಿನ ಕಛೇರಿಯ ಕೋಣೆಯೊಂದರಲ್ಲಿ ಒಬ್ಬ ಸಾರ್ಜೆಂಟ್ ಕುಳಿತಿದ್ದಾನೆ, ಅವನ ಬಾಯಲ್ಲಿ ಸಿಗಾರ್ ಕೈಯಲ್ಲಿ ವೃತ್ತಪತ್ರಿಕೆ, ಅವನ ಹಿಂದಿದ್ದ ಕ್ಯಾಲೆಂಡರ್ ಮತ್ತು ಗೋಡೆ ನಡುವೆ ನಿತ್ಯ ಹಸಿರು ಮರದ ಎಲೆ-ಹೂಗಳ ಗೊಂಚಲು. ಸೆರೆಮನೆಯ ಕಾವಲುಗಾರರನ್ನು ಬಿಟ್ಟು ಉಳಿದ ಪೋಲೀಸರೆಲ್ಲ ಹಬ್ಬವನ್ನು ಸಂಭ್ರಮದಿಂದ ಆಚರಿಸಲು ಮನೆಗೆ ಹೋಗಿದ್ದಾರೆ.

ಮೃತ್ಯು ಮೌನ.

ಸೆರೆಮನೆಯನ್ನು ನಿರ್ಮಲವಾಗಿಡುವ ಹೊಣೆ ಹೊತ್ತ ಕೈದಿಗಳು, ವಾರದ ದಿನಗಳ ಗಡಿಬಿಡಿಗದ್ದಲಗಳನ್ನೆಲ್ಲ ಕಸದೊಂದಿಗೆ ಗುಡಿಸಿಬಿಟ್ಟಿದ್ದಾರೆ. ಈಗ ಉಳಿದಿರುವುದು ಕೈದಿಗೂಡುಗಳ, ಬೀಗ ಹಾಕಿದ ಬಾಗಿಲುಗಳ ಸುತ್ತ ಮುತ್ತ ಗಸ್ತುಹೊಡೆಯುತ್ತಿರುವ ಭಾರವಾದ ನೀರವತೆ ಮಾತ್ರ. ಸೆರೆಮನೆಯೊಳಗೆ ಒತ್ತಿ ಒತ್ತಿ ತುಂಬಿದ ಜನ; ಒಂದೊಂದು ಗೂಡಿನಲ್ಲೂ ಐದ್ಯೆದು ಮಂದಿ. ಆದರೆ ಇವರೆಲ್ಲರ ನಡುವೆ ಒಬ್ಬ ಮಾತ್ರ ಏಕಾಂಗಿ. ಅವನಿಗೆ ಎರಡನೆಯ ಮಹಡಿಯ ನೂರನಲವತ್ತಾರನೆಯ ಗೂಡಿನಲ್ಲಿ ಏಕಾಂತ ವಾಸದ ಶಿಕ್ಷೆ. ಅವನು ಗೆಸ್ಟಪೋಗಳ ಬಂಧಿ. ಅವನ ಹೆಸರು ಲುಡ್ವಿಗ್ ಗೆರ್‌ಮರ್.

ಅವನು ಅಲ್ಲಿಗೆ ಬಂದು ಬಹಳ ದಿನಗಳಾಗಿರಲಿಲ್ಲ. ಅವನು ವಾಸಿಸುತ್ತಿದ್ದ ನಗರ ಭಾಗದ ಸಂಗಾತಿಗಳನ್ನೆಲ್ಲ ತಿಂಗಳುಗಳ ಹಿಂದೆಯೇ ಸೆರೆಹಿಡಿದಿದ್ದರು. ಆದರೆ, ಗೆಸ್ಟಪೋ ಇವನನ್ನು ಹಿಡಿದು ತಂದಿದ್ದು ಕೇವಲ ಹದಿನೈದು ದಿನಗಳ ಹಿಂದೆ. ಒಂದು ದಿನ ಮುಂಜಾನೆ, ಮನೆಯ ಕರೆಗಂಟೆ ಜೋರಾಗಿ ಚೀರಿತ್ತು ಹೆಡಿ, ಹಾಸಿಗೆಯ ಮೇಲೆ ಥಟ್ಟನೆ ಎದ್ದು ಕುಳಿತುಕೊಂಡಿದ್ದಳು.

'ಲುಡ್ವಿಗ್ ! ಅದು ಯಾ ರಿ ರ ಬಹುದು ?'

'ಅವರು ಬಂದಿದ್ದಾರೆ' ಎಂದು ಗೊಣಗಿದ್ದ ಅವನು. ಅವನ ಮುಖದ ಮೇಲೆ ಕಳೆಯಿಲ್ಲದ ಮುಗುಳ್ನಗೆ.

ಮಗು ತನ್ನ ಮಂಚದ ಮೇಲೆ ಶಾಂತವಾಗಿ ಮಲಗಿತ್ತು. ಅಪರಿಚಿತ ಜನ ಮಲಗುವ ಮನೆಯನ್ನು ತಲೆಕೆಳಗು ಮಾಡತೊಡಗಿದಾಗಲೇ ಅದಕ್ಕೆ ಎಚ್ಚರ. ಹೆದರಿದ ಹಸುಳೆಯನ್ನು ಹೆಡಿ ತನ್ನ ತೋಳುಗಳಲ್ಲಿ ಅಡಗಿಸಿಗೊಂಡಿದ್ದಳು....

ಇದೆಲ್ಲ ನಡೆದದ್ದು ಎರಡು ವಾರಗಳ ಹಿಂದೆ. ಆಮೇಲೆ ಗೆರ್‌ಮರ್ ತನ್ನ ಹೆಂಡತಿಯನ್ನು ನೋಡಿದ್ದು ಒಂದೇ ಒಂದು ಬಾರಿ. ಅವನ ಬಂಧನವಾಗಿ 3 ದಿನಗಳ ಅನಂತರ, ಅವನನ್ನು ಕೈದಿಗೂಡಿನಿಂದ ಹೊರಗೆ ಕಬ್ಬಿಣದ ಮೆಟ್ಟಲುಗಳ ದಾರಿಯಲ್ಲಿ ಕರೆದು ತಂದಿದ್ದರು. ಅವನಂತೂ ಇನ್ನೊಂದು ಅಡ್ಡ ವಿಚಾರಣೆ ತನಗಾಗಿ ಕಾದಿದೆಯೆಂದೇ ನಂಬಿದ್ದ. ಆದರೆ ಹೊರಗಿನ ಜನರಿಂದ ತುಂಬಿದ್ದ ಕೋಣೆಯೊಂದರೊಳಗೆ ಅವನನ್ನು ಕರೆದೊಯ್ದರು. ಇದ್ದಕ್ಕಿದ್ದಂತೆ ಅವನೆದುರು ಅವನ ಹೆಂಡತಿ.ಅವರಿಬ್ಬರ ಸುತ್ತ ಇತರ ಸೆರೆ ಆಳುಗಳು ಮತ್ತು ಅವರನ್ನು ನೋಡಲು ಬಂದಿದ್ದ ಜನ.

ಗಡ್ಡ ಬೆಳೆದ, ಏಟುಗಳಿಂದ ಜರ್ಜರಿತವಾಗಿದ್ದ ತನ್ನ ಗಂಡನ ಮುಖವನ್ನು ನೋಡಿದಾಗ ಹೆಡಿಗೆ ತೀವ್ರ ಆಘಾತವಾಯಿತು. ತಾನು ಹೇಗೆ ಕಾಣಿಸುತ್ತಿರುವೆನೆನ್ನುವುದು ಸ್ವತಃ ಗೆರ್‌ಮರ್‌ಗೇ ಗೊತ್ತಿರಲಿಲ್ಲ. ಏಕೆಂದರೆ ಅವನ ಹತ್ತಿರ ಕನ್ನಡಿ ಇರಲಿಲ್ಲ. ಆದ್ದರಿಂದ ತನ್ನಲ್ಲಾಗಿದ್ದ ಭೀಕರ ಬದಲಾವಣೆಯ ಅರಿವು ಅವನಿಗಿರಲಿಲ್ಲ.

ಬಂಧುಮಿತ್ರರ ಭೇಟಿಗಳನ್ನು ನಿಯಂತ್ರಿಸುವ ಕಾವಲುಗಾರರು, ಬಂದವರನ್ನು ಹೊರಗೆ ಹೋಗಿರೆಂದು ಅವಸರಪಡಿಸತೊಡಗಿದ್ದರು. ಸೆರೆಯಾಳುಗಳನ್ನು ಬಲವಂತವಾಗಿ ಅವರ ಗೂಡುಗಳಿಗೆ ತಳ್ಳುವ ಕೆಲಸ ನಡೆದಿತ್ತು. ಬೇಕಾದಷ್ಟು ಗದ್ದಲ, ತಳ್ಳುವುದು, ನೂಕುವುದು. ಹೆಡಿ ಮತ್ತು ಲುಡ್ವಿಗ್ ಆಗತಾನೇ ಒಬ್ಬರನ್ನೊಬ್ಬರು ನೋಡಿದ್ದರು. ಅಷ್ಟರಲ್ಲೆ ಅವರನ್ನು ಬೇರ್ಪಡಿಸಲಾಯಿತು. ತಾವು ಪರಸ್ಪರ ಒಂದು ಮಾತನ್ನೂ ಆಡಿಲ್ಲವೆನ್ನುವುದು ಲುಡ್ವಿಗ್‌ಗೆ ಗೊತ್ತಾಗುವುದರೊಳಗೆ, ಅವನ ಹೆಂಡತಿ ಬಾಗಿಲ ಹತ್ತಿರ ಇದ್ದಳು. ಒಂದು ಮಾತು ತೊದಲಲು ಮಾತ್ರ ಅವನಿಗೆ ಸಾಧ್ಯವಾಯಿತು. ಹೆಡಿಯ ಮುಖ ನೋವಿನಿಂದ ವಿಕಾರ ಆಗಿತ್ತು.

'ಯೋಚನೆ ಮಾಡಬೇಡ ಹೆಡಿ, ನಾನು ವಾಪಸ್ ಬರ್ತೀನೆ, ಕ್ರಿಸ್‌ಮಸ್ ಹಬ್ಬದ ಹೊತ್ತಿಗೆ ನಾನು ಮನೇಲಿ ಇರ್ತೀನೆ. ಹುಡುಗನಿಗೆ ನನ್ನ ಪರವಾಗಿ ಒಂದು ಮುತ್ತು ಕೊಡು.'

ಅಷ್ಟು ಹೇಳಿ ಅವನು ಮುಗುಳ್ನಗೆ ಬೀರಿದ್ದ. ಮುರಿದ ಹಲ್ಲುಗಳನ್ನು ಮರೆತು ನಕ್ಕಿದ್ದ. ಹಲ್ಲಿದ್ದ ಜಾಗದಲ್ಲಿ ಹಳ್ಳವಿತ್ತು. ಬಾಯಿ ಇದ್ದ ಕಡೆ ರಕ್ತ ಅಂಟಿದ ಬಿಲ. ಏಕೆಂದರೆ ಅಲ್ಲಿಗೆ ಬಂದ ದಿನವೇ ಅವನ ಹಲ್ಲುಗಳನ್ನು ಮುರಿದಿದ್ದರು.

ನಗರವನ್ನು ಇತ್ತೀಚೆಗೆ ಅಪ್ಪಳಿಸಿದ್ದ ಬಂಧನಗಳ ಅಲೆಗೆ ಸಿಲುಕಿ ಸೆರೆಮನೆಗೆ ಸೆಳೆಯಲ್ಪಟ್ಟವರಲ್ಲಿ ಗೆರ್‌ಮರ್ ಕೊನೆಯವ.. ಅವನಿದ್ದ ವಿಸ್ತರಣದಲ್ಲಿ ಹೊಸದಾಗಿ ವ್ಯವಸ್ಥಿತವಾಗಿದ್ದ ಭೂಗತ ತಂಡವು, ಅದರಲ್ಲಿದ್ದ ; ಎಲ್ಲ ಸಂಗಾತಿಗಳ ಬಂಧನದೊಂದಿಗೆ, ಸಂಪೂರ್ಣವಾಗಿ ಚೂರು ಚೂರಾಗಿತ್ತು. ಗೆಸ್ಟಪೋ ಅಧಿಕಾರಿ ಟ್ರೋಖರ್. ಸೆರೆ ಆದವರನ್ನು ಹೊಡೆದು, ಹೊಡೆದು ತನಗೆ ಬೇಕಾದ ಮಾಹಿತಿಯನ್ನು ಅವರಿಂದ ಕೊಂಚ ಕೊಂಚವಾಗಿ ಹೊರಗೆ ತೆಗೆದಿದ್ದ. ಹಾಗೆ ನೋಡಿದರೆ ಅವನು ಸಭ್ಯನೂ, ಸುಸಂಸ್ಕೃತನೂ ಆಗಿದ್ದ ಮನುಷ್ಯ. ಹೊಡೆತ, ಬಡಿತಗಳಲ್ಲಿ ಅವನು ನೇರವಾಗಿ ಭಾಗವಹಿಸಿದ್ದೇ ಇಲ್ಲ. ಯಾವನಾದರೂ ಒಬ್ಬ ಬಂದಿಯನ್ನು ಬಾಯಿ ಬಿಡಿಸುವುದರಲ್ಲಿ ಅವನು ವಿಫಲನಾದರೆ, ಅಂತಹ ವ್ಯಕ್ತಿಯನ್ನು ನೇರವಾಗಿ ನೆಲ ಮಾಳಿಗೆಗೆ ಕರೆತರಿಸುತ್ತಿದ್ದ.ಅಲ್ಲೊಂದು ಏಕಾಂತ ವಾಸದ ಗೂಡು. ಅದರೊಳಗೊಂದು ಪುಟ್ಟ ಮೇಜು. ಅದರ ಮೇಲೊಂದು ಟೈಪ್‌ರೈಟರ್ ಮಧ್ಯದಲ್ಲಿ ಒಂದು ಕುರ್ಚಿ. ಮೂಲೆಯಲ್ಲಿ ಒಂದು ನಲ್ಲಿ. ಅದರ ಪಕ್ಕದಲ್ಲಿ ನೇತಾಡುತ್ತಿತ್ತು ಒಂದು ರಕ್ತಸಿಕ್ತ ಕೊಳಕು ಟವೆಲ್. ಅಲ್ಲಿ ಆರು ಜನ ಸಮವಸ್ತ್ರ ಧರಿಸಿದ ಎಸ್. ಎಸ್. ಯೋಧರು ಸೆರೆಯಾಳುಗಳನ್ನು ಅಡ್ಡ ವಿಚಾರಣೆಗಾಗಿ 'ಸಿದ್ಧಪಡಿಸು'ವುದು ಅವರ ಕೆಲಸ.

'ಹಾಗಾ ?' ನೀನು ಬಾಯಿಬಿಡೋದಿಲ್ವಾ, ಹಂದೀ ? ನೋಡ್ತಾ ಇರು ಇನ್ನು ಹದಿನೈದು ನಿಮಿಷದಲ್ಲಿ ಗಿಳೀ ಹಾಗೇ ಮಾತಡ್ತ್ರೀಯಾ.'

ಸೆರೆಯಾಳನ್ನು ಕುರ್ಚಿಯ ಮೇಲೆ ತಳ್ಳುತ್ತಿದ್ದರು. ಇಬ್ಬರು ಅವನ ತೋಳುಗಳನ್ನು ಗಟ್ಟಿಯಾಗಿ ಎಳೆದು ಕುರ್ಚಿಯ ಹಿಂದೆ ಹಿಡಿಯುತ್ತಿದ್ದರು. ಇನ್ನಿಬ್ಬರು ಮುಂದೆ ಚಾಚಿದ ಅವನ ಪಾದಗಳನ್ನು ನೆಲಕ್ಕೆ ಒತ್ತಿ ಹಿಡಿಯುತ್ತಿದ್ದರು. ಐದನೆಯವನು ಅವನ ಹಿಂದೆ ನಿಂತು ಕೂದಲುಗಳನ್ನು ಜಗ್ಗುತ್ತಿದ್ದ. ಕೊನೆಯವನು ಅವನ ಅಗಲಿಸಿದ ಕಾಲುಗಳ ನಡುವೆ ನಿಂತು, ತನ್ನ ರಾಕ್ಷಸ ಮುಷ್ಟಿಗಳಿಂದ ಒಂದೇ ಸಮನೆ ಹೊಡೆಯುತ್ತಿದ್ದ-ಅವನ ಕೂಗು-ಕಿರಿಚಾಟಗಳು, ನೋವು ತುಂಬಿದ ದುರ್ಬಲ ನರಳುವಿಕೆಯಲ್ಲಿ ಕರಗಿ ಹೋಗುವವರೆಗೆ.

ಪಕ್ಷದ ಜಿಲ್ಲಾ ಸಂಘಟನೆಗೂ ನಡುವೆ ಇರುವ ಕೊಂಡಿ ಯಾರೆಂದು ಕಂಡು ಹಿಡಿಯುವುದು ಎಂದಿನಂತೆ ಈ ಮಹತ್ವದ ಕೆಲಸವನ್ನು ಮಾಡುತ್ತಿದ್ದವನು ಒಬ್ಬನೇ ಒಬ್ಬ ವ್ಯಕ್ತಿ. ಅತ ಲುಡ್ವಿಗ್ ಗೆರ್‌ಮರ್. ಅವನೇ ಟ್ರೋಖರ್‌ನ ಕೊನೆಯ ಆಶಾಕಿರಣ. ಅವನ ಮೂಲಕ ಮೇಲಿನ ಸಂಘಟನೆಯ ಮುಖ್ಯಸ್ಥರನ್ನು ಕೂಡ ಹಿಡಿಯಲು ಸಾಧ್ಯವಾಗಬಹುದೆಂದು ಟ್ರೋಖರ್‌ನ ಆಸೆ.

ಕಳೆದ ಹದಿನಾಲ್ಕು ದಿನಗಳಿಂತ, ಗೆರ್‌ಮರ್ ತನ್ನ ಸಂಗಾತಿಗಳು ಅನುಭವಿಸಿದ ಚಿತ್ರಹಿಂಸೆಗೆ ತಾನೂ ಗುರಿಯಾಗಿದ್ದ. ಅವನನ್ನು ನೆಲಮಾಳಿಗೆಗೆ ಎಳೆದುಕೊಂಡು ಹೋದದ್ದು ಒಂದಲ್ಲ, ಹಲವು ಬಾರಿ. ದೇಹಬಲದ ದೃಷ್ಟಿಯಿಂದ ನೋಡಿದರೆ ತನಗೆ ಹಿಂಸೆ ಕೊಡುತ್ತಿದ್ದ ಯೋಧರಷ್ಟೇ ಅತನೂ ಶಕ್ತಿವಂತನಾಗಿದ್ದ. ಆದ್ದರಿಂದಲೇ ಎಲ್ಲವನ್ನೂ ಸಹಿಸಿಕೊಂಡು ಇನ್ನೂ ಬದುಕಿದ್ದ. ಅವರ ಗುದ್ದುವ ಮುಷ್ಟಿಗಳು, ಅವನನ್ನು ಇನ್ನಷ್ಟು ಸದೃಢಗೊಳಿಸುತ್ತಿವೆಯೇನೋ ಎನ್ನುವಹಾಗೆ, ಕಬ್ಬಿಣವನ್ನು ಕುಟ್ಟಿಕುಟ್ಟಿ ಗಟ್ಟಿ ಮಾಡುವಂತೆ. ಕೊನೆಗೂ ಟ್ರೋಖರ್‌ಗೆ ಸರಿಯಾದ ಎದುರಾಳಿ ಸಿಕ್ಕಿದ್ದ.

ಗೆರ್‌ಮರ್‌ನನ್ನು ನೋ ೀ ಡು ತ್ತ ಅವನು ಗುರು ಗುಟ್ಟಿದ್ದ :

"ಲೋ ನನ್ಮಗನೇ, ನೀನು ಇದರಿಂದ ಜೀವಸಹಿತ ಹೊರಗೆ ಬರೋದಿಲ್ಲ. ಒಂದೋ ನೀನು ಮಾತಾಡ್ತಿ, ಇಲ್ಲ ವಾದ್ರೆ ನಾನು ನಿನ್ನನ್ನು ಕೊಲ್ತೇನೆ."

ಗೆಸ್ಟಪೋ ಅಧಿಕಾರಿಯ ಮುಗುಳ್ನಗೆಯ ಹಿಂದೆ ಇದ್ದ ಧೂರ್ತ ಸಂಚು ಗೆರ್‌ಮರ್‌ಗೆ ಕೊನೆಯ ಗಳಿಗೆಯಲ್ಲಿ ಫಕ್ಕನೆ ಮಿಂಚಿತು

ಹೀಗೆ ಅವನನ್ನು ಸಾಕಷ್ಟು ಹಣ್ಣುಗಾಯಿ ನೀರುಗಾಯಿ ಮಾಡಿದ ಬಳಿಕ ಅವನು ಇನ್ನು ಮೇಲೆ ಬಾಯಿ ಬಿಡುತ್ತಾನೆ ಎನ್ನಿಸಿದರೆ ಕುರ್ಚಿಯನ್ನು ಮೇಜಿನ ಹತ್ತಿರ ತಳ್ಳುತ್ತಿದ್ದರು. ಸೆರೆ ಆಳನ್ನು ಮತ್ತೆ ಅಧಿಕಾರಿಯ ವಶಕ್ಕೆ ಒಪ್ಪಿಸುತ್ತಿದ್ದರು. ಕೆಲವು ಸಾರಿ ಅವರು ಎಚ್ಚರ ತಪ್ಪಿದ ಮನುಷ್ಯನನ್ನು ನಲ್ಲಿಯ ಹತ್ತಿರ ಎಳೆದುಕೊಂಡು ಹೋಗಿ,ಪ್ರಜ್ಞೆ ಬರುವ ತನಕ ಅವನ ಮೈ-ಮುಖಗಳ ಮೇಲೆ ನೀರು ರಾಚುತ್ತಿದರು.

ಎಷ್ಟೋ ಜನ ಸಂಗಾತಿಗಳು ಇಂತಹ ಯಮ ಯಾತನೆಯನ್ನು ಅನುಭವಿಸಿಯೂ ಕೂಡ ಮೌನಿಗಳಾಗಿಯೇ ಉಳಿದಿದ್ದರು. ಆದರೆ ಬೇರೆಕೆಲವರು ಕಣ್ಣು, ಮೂಗು ಗುರುತಿಸಲಾಗದಷ್ಟು ಏಟು ತಿಂದು ರಕ್ತ ಬಳಿದ ಮುದ್ದೆಗಳಾದ ಮೇಲೆ ನಿಧಾನವಾಗಿ ಬಾಯಿಬಿಟ್ಟಿದ್ದರು ತಮ್ಮೊಂದಿಗೆ ಸಂಪರ್ಕಹೊಂದಿದ್ದವರ ಹೆಸರುಗಳನ್ನು ನರಳುತ್ತ ತಿಳಿಸಿದ್ದರು. ಟ್ರೋಖರ್‌ಗೆ,ಸಂಘಟನೆಯನ್ನು ಕುರಿತ ಮಾಹಿತಿಗಳೆಲ್ಲ ದೊರೆತದ್ದು ಹೀಗೆಯೇ. ಈಗ ನಗರದ ಈ ಭಾಗದಲ್ಲಿ ನಡೆಯುತ್ತಿದ್ದ ಎಲ್ಲ ಚಟುವಟಿಕೆಗಳೂ ಅವನಿಗೆ ಚಾಚೂ ತಪ್ಪದೆ ಗೊತ್ತಾಗಿದ್ದವು. ಇನ್ನು ಅವನ ಮುಂದೆ ಇದ್ದದ್ದು ಒಂದೇ ಒಂದು ಹೆಜ್ಜೆ. ಸ್ಥಳೀಯ ಗುಂಪಿಗೂ ಭೂಗತ

ಇಂದು ಕ್ರಿಸ್‌ಮಸ್ ಹಬ್ಬದ ಮುನ್ನಾದಿನ. ರಾತ್ರಿಯ ಎಷ್ಟೊ ಗಂಟೆಗಳು ಕಳೆದಿವೆ. ಎಲ್ಲೆಲ್ಲಿಯೂ ಎಲೆ ಮಿಸುಕದ ಮಸಣಮೌನ.

ಗೆರ್‌ಮರ್ ತನ್ನ ಗೂಡಿನೊಳಗೆ ಒಂದು ಸ್ಟೂಲ್ ಮೇಲೆ ಕುಳಿತಿದ್ದಾನೆ. ಅವನ ತೊಡೆಗಳ ಕೆಳಗೆ, ಅಗಲವಾಗಿ ಬಿಡಿಸಿದ, ಅಂಗೈಗಳು. ಈ ದುಷ್ಟ ಮೌನ ಅವನಲ್ಲಿ ಯಾವುದೋ ಹೆಸರಿಸಲಾಗದ ಭಯವನ್ನು ಹುಟ್ಟಿಸುತ್ತಿದೆ.

ಗೂಡಿನ ಛತ್ತಿನಲ್ಲಿ ಒಂದೇ ಒಂದು ವಿದ್ಯುದ್ದೀಪ ಮಂಕಾಗಿ ಉರಿಯುತ್ತಿತ್ತು. ಅದರ ಕೆಳಗೆ ತಂತಿಬಲೆ. ಗೆರ್‌ಮರ್ ಮೇಲೆ ನೋಡುತ್ತಾನೆ. ಮನಸ್ಸಿನಲ್ಲಿ ಒಂದು ಬಗೆಯ ವಿಚಿತ್ರ ಉದ್ವೇಗ. ಅವನ ನಾಲಿಗೆ, ಹಲ್ಲಿಲ್ಲದ ಒಸಡಿನ ಮೇಲೆ ನಿಧಾನವಾಗಿ ಚಲಿಸಿತು. ಅಲ್ಲಿ ಛಿದ್ರ ಛಿದ್ರವಾಗಿದ್ದ ಮಾಂಸವು ಈಗ ಕೂಡಿಕೊಳ್ಳತೊಡಗಿದೆ. ಅವನ ಮೆದುಳು ಬರಿದಾದಂತಿತ್ತು. ಉರಿಯುತ್ತಿರುವ ದೀಪ ಅವನನ್ನು ಆಕರ್ಷಿಸಿತು. ಮೆದುಳು ಮತ್ತೆ ಕೆಲಸ ಮಾಡತೊಡಗಿತು.

(6ನೇ ಪುಟವನ್ನು ನೋಡಿ)

ಧರ್ಮದ ಬಗ್ಗೆ ಮಾರ್ಕ್ಸ್‌ವಾದ

—"ಹಿ."

ಭಾರತದಲ್ಲಿ ಜಾತಿ ವಿಶಿಷ್ಟ ಪ್ರಕ್ರಿಯೆ ಆಗಿದ್ದರೂ ಕೂಡ, ಅದು ಧರ್ಮದ ಅಂಗವಾಗಿ, ಮೇಲ್‌ರಚನೆಯ ಅಂಶವೇ ಆಗಿರುತ್ತದೆ. ಆದರೆ ಮೂಲಭೂತವಾದ ಆರ್ಥಿಕ ರಚನೆಗೆ ಉಳಿದ ಮೇಲ್ ರಚನೆಗಳಿಗಿಂತ ಹೆಚ್ಚು ನೇರವಾದ ಸಂಬಂಧ ಹೊಂದಿರುತ್ತದೆ. ಇದನ್ನು ಹಾಗೂ ಅದರ ಅವಶೇಷ ಲಕ್ಷಣಗಳು (ಅರೆಊಳಿಗಮಾನ್ಯ ಲಕ್ಷಣಗಳಲ್ಲಿ, ಮತ್ತು ಲಕ್ಷಣಗಳಂತೆ) ಉಳಿದುಕೊಂಡು ಬಂದಿರುವುದನ್ನು ಗಮನಿಸದ, ಹಲವಾರು ಎಡವಾದಿಗಳೆಂದು ಕರೆದುಕೊಳ್ಳುವರೂ ತಮ್ಮ ಅಜ್ಞಾನದಿಂದಾಗಿ ಎಡ ಸಿದ್ಧಾಂತಕ್ಕೇನೆ ಅಪಚಾರ ಮಾಡುತ್ತಿದ್ದಾರೆ. ಇದೆಲ್ಲದರ ಅರ್ಥ ಜಾತಿ ಹೋರಾಟವನ್ನು ನಿರ್ಲಕ್ಷಿಸುವುದೆಂದು ಅವರು ಮಾರ್ಕ್ಸ್‌ವಾದಿಗಳ ವಿರುದ್ಧ ಸಾಮಾನ್ಯವಾಗಿ ಅಪಪ್ರಚಾರ ಮಾಡುತ್ತಿರುತ್ತಾರೆ. ಆದ್ದರಿಂದ ಧರ್ಮ, ಜಾತಿ ದೇವರುಗಳ ಬಗ್ಗೆ ಗೊಂದಲವಿರುವ ಪ್ರಸ್ತುತ ಸಂದರ್ಭದಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸರು ಈ ವಿಷಯಗಳ ಬಗ್ಗೆ ಚಿಂತಿಸಿದ್ದನ್ನು ಅವಲೋಕಿಸುವುದು ಸಾಂದರ್ಭಿಕ ಅಗತ್ಯವಾಗಿರುತ್ತದೆ.

ಧರ್ಮದ ತಿರುಳು ಮತ್ತು ಅದರ ಉಗಮಗಳ ಬಗ್ಗೆ, ವರ್ಗ ಸಮಾಜದಲ್ಲಿ ಅದರ ಪಾತ್ರದ ಬಗ್ಗೆ ಮಾರ್ಕ್ಸ್ ಮತ್ತು ಎಂಗೆಲ್ಸ್ ಹಲವಾರು ಕಡೆ ಚರ್ಚಿಸುತ್ತಾರೆ. ದುಡಿಯುವ ಜನತೆಯು ತಾತ್ವಿಕ ತಳಹದಿಯಾದ ಮಾರ್ಕ್ಸ್‌ವಾದಿ ನಿರೀಶ್ವರವಾದ (ನಾಸ್ತಿಕವಾದ)ದ ಬಗ್ಗೆ ನಾವು ತಿಳಿಯಲೇಬೇಕು. ನಿಸರ್ಗದ ಮತ್ತು ಸಮಾಜದ ಬೆಳವಣಿಗೆಯ ವಸ್ತುನಿಷ್ಠ ನಿಯಮಗಳ ಆಧಾರದ ಮೇಲೆ ಮಾರ್ಕ್ಸ್ ಮತ್ತು ಎಂಗೆಲ್ಸರು ಈ ಜಾಗತಿಕ ದೃಷ್ಟಿಕೋನವನ್ನು ಶೋಧಿಸಿದರೆಂಬುದನ್ನು ಗಮನಿಸಬೇಕು. ವಿಜ್ಞಾನದ ಹಲವು ಹತ್ತು ಶಾಖೆಗಳ ಆಧಾರಗಳಮೇಲೆ ಈ ಶೋಧನೆ ನಿಂತಿದೆ. ಮತ್ತು ಧರ್ಮ ಸಿದ್ಧಾಂತಗಳಿಗೆ ವೈಚಾರಿಕವಾಗಿ ನೇರ ಮುಖಾಮುಖಿಯಾಗಿದೆ.

ಮಾರ್ಕ್ಸ್‌ವಾದದ ನೇತಾರರು ತಮ್ಮ ಕಾಲದ ಪ್ರಚಲಿತ ಮತ್ತು ಪರಂಪರಿತ ತತ್ವಜ್ಞಾನಗಳ ಬಗ್ಗೆ (ಗ್ರೀಕ್, ಫ್ರೆಂಚ್—ಒಟ್ಟಾರೆ ಯುರೋಪಿನ ಆದರ್ಶವಾದಿ ಮತ್ತು ಭೌತವಾದಿ ತತ್ವಜ್ಞಾನಗಳೂ ಕೂಡ), ಅವು ಆಯಾ ಕಾಲಘಟ್ಟಗಳಲ್ಲಿ ವಹಿಸುತ್ತ ಬಂದ ಪಾತ್ರಗಳ ಬಗ್ಗೆ, ಹೋರಾಟಗಳ ಬಗ್ಗೆ ವಿಶ್ಲೇಷಿಸುತ್ತಾರೆ. ಉದಾಹರಣೆಗೆ—18ನೇ ಶತಕದ ಫ್ರೆಂಚ್ ಭೌತವಾದಿಗಳು ತಮ್ಮ ಕಾಲದ ಪ್ರತಿಗಾಮಿ ಫ್ಯೂಡಲ್ ಮತ್ತು ಧಾರ್ಮಿಕ ದೃಷ್ಟಿಕೋನಗಳ ವಿರುದ್ಧ ಹೋರಾಡಿದ ಮಹತ್ವದ ಪಾತ್ರ ಮತ್ತು ಒಂದೆಡೆ ನಾಸ್ತಿಕವಾದದ ಪ್ರಚಾರ ಮತ್ತು ಭೌತವಾದಿ ತತ್ವಜ್ಞಾನದ ಬೆಳವಣಿಗೆಗಳ ಮಧ್ಯೆ ಸಂಬಂಧವನ್ನು, ಮತ್ತೆ ಇನ್ನೊಂದೆಡೆ ಪ್ರಾಕೃತಿಕ ವಿಜ್ಞಾನಗಳ ಕೊಡುಗೆಯನ್ನು ಕುರಿತು ವಿವೇಚಿಸುತ್ತಾರೆ.

ನಾಸ್ತಿಕವಾದ ಪ್ರಗತಿಪರ ವರ್ಗಗಳಿಗೆ ವಿಶಿಷ್ಟವಾದದ್ದು. ಇಂಗ್ಲೀಷ್ ಮತ್ತು ಫ್ರೆಂಚ್ ಭೌತವಾದಿ ನಾಸ್ತಿಕರು, ಕಿತ್ತೇಳುತ್ತಿದ್ದ ಬೂರ್ಜ್ವಾ ವರ್ಗದ ತತ್ವವಾದಿಗಳಾಗಿದ್ದರು. ಆದರೆ ಬೂರ್ಜ್ವಾ ವರ್ಗದ ಸ್ವಾರ್ಥಿ ಕುತಂತ್ರವನ್ನು ಮಾರ್ಕ್ಸ್, ಎಂಗೆಲ್ಸರು ಬಯಲಿಗಿಡುತ್ತ ಆ ವರ್ಗ ಅಧಿಕಾರಕ್ಕೆ ಬಂದ ತಕ್ಷಣ ಮತ್ತು ಕಾರ್ಮಿಕ ವರ್ಗದ ಚಳುವಳಿ ಹೆಚ್ಚಿದಂತೆಲ್ಲ, ಅದು ತನ್ನ ಹಿತಾಸಕ್ತಿಯನ್ನು ಉಳಿಸಿಕೊಳ್ಳಲು ತನ್ನ ಕ್ರಾಂತಿ ಸ್ವರೂಪದ ವಿರುದ್ಧ ತಾನೆ ನಿಂತಿತೆಂಬುದನ್ನು, ಜನಸಮುದಾಯಕ್ಕೆ ಧರ್ಮವನ್ನು ಮತ್ತೇರಿಸುವ ವಸ್ತುವನ್ನಾಗಿ ಬಳಸತೊಡಗಿದ್ದನ್ನು ಹೊರಗೆಡವುತ್ತಾರೆ.

17–18ನೇ ಶತಮಾನದ ಭೌತವಾದಿಗಳ ಮತ್ತು ನಾಸ್ತಿಕವಾದಿಗಳ ಪ್ರಚಾರದ ಮಹತ್ವವನ್ನು ಪ್ರಸ್ತುತಪಡಿಸುತ್ತವೆ ಅವರ ಅರೆಬರೆ ಒಲವು, ಅವರ ವರ್ಗ ಸ್ವಭಾವ, ಮಿತಿಗಳನ್ನು, ಅನಾಸಕ್ತಿ ಗುಣವನ್ನು, ದೈವಧ್ಯಾನ ಪರತೆಯನ್ನು, ಧರ್ಮದ ಸಾಮಾಜಿಕ ಬೇರುಗಳನ್ನು ಗುರುತಿಸುವಲ್ಲಿನ ಅವರ ವಿಫಲತೆಯನ್ನು ವಿಮರ್ಶಿಸುತ್ತಾರೆ.

ಮಾರ್ಕ್ಸ್‌ವಾದ ಮಾತ್ರ ಧರ್ಮದ ಮೂಲಭೂತವನ್ನು ಯಥಾವತ್ತಾಗಿ ಹೊರಗೆಡವಿತು. ಜನತೆಯ ದೈನಂದಿನ ಜೀವನವನ್ನು ಪ್ರಭಾವಗೊಳಿಸುವ ಬಾಹ್ಯಶಕ್ತಿಗಳು ಅವರ ಮನಸ್ಸಿನಲ್ಲಿ ಅತ್ಯದ್ಭುತವಾಗಿ ಪ್ರತಿಫಲನಗೊಳ್ಳುವದನ್ನೇ ಧರ್ಮವೆಂದು ಸ್ಪಷ್ಟಗೊಳಿಸಿದ ಮಾರ್ಕ್ಸ್‌ವಾದಿಗಳು ಈ ಪ್ರತಿಫಲನದಲ್ಲಿ ಭೂಮಿಯ ಲೌಕಿಕ ಶಕ್ತಿಗಳು ಅಲೌಕಿಕ ಶಕ್ತಿಗಳಾಗಿ ಆಕಾರ ತಾಳುವುದನ್ನು ಗುರುತಿಸಿದರು.

ಧರ್ಮದ ಮೂಲ : Capital, Anti Duhring, Ludwig Feuerbach ಮುಂತಾದ ಕೃತಿಗಳಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸರು ಧರ್ಮದ ಬೇರುಗಳ ಬಗ್ಗೆ ವಿಶ್ಲೇಷಿಸುತ್ತ, ಮನುಷ್ಯನ ಬೆಳವಣಿಗೆಯ ಪ್ರಾಚೀನಕಾಲದ ಪ್ರಾಥಮಿಕ ಹಂತಗಳಲ್ಲಿ, ಆ ಕಾಲದ ಮನುಷ್ಯನ ನಿಸರ್ಗ ಶಕ್ತಿಗಳ ವಿರುದ್ಧ ಹೋರಾಡುವಲ್ಲಿನ ಅಸಹಾಯಕತೆ ಅವನ ಧರ್ಮದ ನಂಬಿಕೆಗಳಲ್ಲಿ ಎದ್ದು ಬಂದಿರುವುದನ್ನು ಸ್ಪಷ್ಟಗೊಳಿಸಿದರು. (ವೇದೋಪನಿಷತ್ತುಗಳನ್ನು ಈ ಹಿನ್ನೆಲೆಯಲ್ಲಿ ಅವಲೋಕಿಸಬಹುದು) ಮತ್ತು ಘರ್ಷಣೆಗಳ ವರ್ಗ ಸಮಾಜದಲ್ಲಿ ದುಡಿಯುವ ಜನತೆಯು ತಮ್ಮ ಮೇಲಿನ ಸಾಮಾಜಿಕ ತುಳಿತದಿಂದ, ದಬ್ಬಾಳಿಕೆ ಮಾಡುವ ವರ್ಗದ ವಿರುದ್ಧ ತಾವುಎದುರಿಸಲಾಗದ ಅಸಹಾಯಕತೆಯಿಂದ ಧರ್ಮಗಳು ಹುಟ್ಟಿದುವೆಂಬುದನ್ನು ಹೇಳಿದರು. ಈ ಲೋಕದಾಚೆಗಿನ ಲೋಕದಲ್ಲಾದರು ಸುಖಪಡುವ, ಈ ಲೋಕದ ಕಷ್ಟಗಳಿಗೆ ಆ ಕಾಲ್ಪನಿಕ ಲೋಕದ ಸುಖವೇ ಪ್ರತಿಫಲವೆಂಬ ಮೂಢನಂಬಿಕೆಗಳಲ್ಲಿ ಮುಳುಗುವಂತಾದರು ಅಥವಾ ಮುಳುಗಿಸಲ್ಪಟ್ಟರು.

ಧರ್ಮ ಸಾಮಾಜಿಕ ಪ್ರಜ್ಞೆಗಳಲ್ಲಿ ಒಂದು ರೂಪ; ಮತ್ತು ಸಾಮಾಜಿಕ ಸಮಸ್ಯೆಯೂ ಆಗಿದೆ. ವರ್ಗ ಸಮಾಜದಲ್ಲಿ ಅದು ಒಂದು ಮೇಲ್ ರಚನೆ. ವರ್ಗಸಮಾಜದಲ್ಲಿ ಧರ್ಮ ಸಾಮಾಜಿಕ ಸಂಬಂಧಗಳ ಬೆಳವಣಿಗೆಯನ್ನು ಹೀಗೆಲ್ಲ ಅವಲಂಬಿಸಿರುತ್ತದೆಂಬುದನ್ನುಮಾರ್ಕ್ಸ್ ಎಂಗೆಲ್ಸರು ಶೋಧಿಸುತ್ತಾರೆ. ದುಡಿಯುವ ಜನವರ್ಗವನ್ನು ತುಳಿಯಲು, ಕುರುಡರನ್ನಾಗಿ ಮಾಡಲು ಧರ್ಮವನ್ನು ಶೋಷಕವರ್ಗ ಸಾಧನವನ್ನಾಗಿ, ಅಸ್ತ್ರವನ್ನಾಗಿ ಮಾಡಲು ಆಸಕ್ತಿ ವಹಿಸುವುದು. (ಬುದ್ಧ,ಬಸವ,ಗಾಂಧಿ ಮುಂತಾದವರ ಸಾಧನೆಗಳ ಜತೆ, ಮಿತಿಗಳನ್ನು ಅಪಾಯಗಳನ್ನು ಅರಿಯಲು ಈ ಚರ್ಚೆ ನಿರ್ದೇಶನ ನೀಡುತ್ತದೆ) ೧೮೪೪ರಲ್ಲಿ ಮಾರ್ಕ್ಸ್ ಬರೆದರು-'ಧರ್ಮ ಜನತೆಯ ಅಫೀಮು' ಎಂದು. ಧರ್ಮದಬಗ್ಗೆ ಮಾರ್ಕ್ಸ್‌ವಾದಿ ದೃಷ್ಟಿಕೋನವನ್ನು ಇಡಿಯಾಗಿ ಹಿಡಿದಿಡುವ ಬಹುಮುಖ್ಯ ಹೇಳಿಕೆ ಇದು.

ಗುಲಾಮರ ಅನೇಕಾನೇಕ ಬಂಡಾಯಗಳ ನಂತರದ ಹತಾಶೆಯ ಅವಧಿಯಲ್ಲಿ ಕ್ರಿಶ್ಚಿಯನ್ ಧರ್ಮ, ನಿರಾಶೆಹೊಂದಿದ ಜನತೆಯ ದೃಷ್ಟಿಕೋನವಾಗಿ ಹುಟ್ಟಿಬಂತು, ರೋಮನ್ ಸಾಮ್ರಾಜ್ಯದ ದಬ್ಬಾಳಿಕೆಯ ವಿರುದ್ಧ ಅನೇಕ ಗುಲಾಮ ರಾಜ್ಯಗಳು ಬಂಡಾಯವೆದ್ದು ರಕ್ತದಲ್ಲಿ ತೇಲಿಹೋದ ನಂತರದ ದರಿದ್ರ ಜನರಿಂದ ಇದು ಹುಟ್ಟಿತು ಎಂದು ಅನೇಕ ಲೇಖನಗಳಲ್ಲಿ ಎಂಗೆಲ್ಸ್ ತೋರಿಸಿಕೊಟ್ಟರು. [ಭಾರತದಲ್ಲೂ ಜೈನ,ಬೌದ್ಧ ವೀರಶೈವ, ಸಿಖ್, ವೈದಿಕ ಮುಂತಾದ ಧರ್ಮಗಳು ಹೀಗೇನೆ ಜನ ತಮ್ಮ ನಿಸ್ಸಹಾಯಕಅಳಲನ್ನು ಈ ಧರ್ಮಗಳಮೂಲಕ ತೋಡಿಕೊಳ್ಳಲು ಯತ್ನಿಸಿವೆ]

ಧರ್ಮ ವೈಜ್ಞಾನಿಕ ಬೆಳವಣಿಗೆಯಲ್ಲಿ ಮೊದಲಿನಿಂದಲೂ ದೊಡ್ಡ ಅಡಚಣೆಯಾಗಿ ನಿಂತಿದೆ. ಹೀಗಾಗಿ ಧರ್ಮ ಮತ್ತು ವಿಜ್ಞಾನಗಳ ಮಧ್ಯೆ ಘರ್ಷಣೆ ಇದ್ದೇ ಇದೆ. ವೈಜ್ಞಾನಿಕ ವಿಚಾರಧಾರೆಯ ಬೆಳವಣಿಗೆಯ ವಿರುದ್ಧದ ಹೋರಾಟದ ಇತಿಹಾಸವೇ ಧರ್ಮದ ಇತಿಹಾಸವಾಗಿದೆ ಎಂದು ಎಂಗೆಲ್ಸ್ ಬರೆಯುತ್ತಾರೆ. ಚರ್ಚ್ ಎಷ್ಟೋ ವಿಜ್ಞಾನಿಗಳನ್ನು, ಅವರ ಕೃತಿಗಳನ್ನು (ಭಾರತದಲ್ಲಿ ಚಾರ್ವಾಕರಂಥವರನ್ನು-ಮಠ, ಗುರುಗಳು) ಚಿತ್ರಹಿಂಸೆಯಿಂದ ಕೊಂದುದನ್ನು, ಸುಟ್ಟುದ್ದನ್ನು, ಪೀಡಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಚರ್ಚ್ ಪ್ರಜಾಪ್ರಭುತ್ವೀಯ ಸಮಾಜವಾದಿ ಚಳುವಳಿಗಳ ವಿರುದ್ಧ ನಿರ್ದಯವಾಗಿ ತನ್ನ ಅತ್ಯಂತ ಪ್ರತಿಗಾಮಿ ಪಾತ್ರವನ್ನು ಆಡಿದೆ.

ಪ್ರಾಕೃತಿಕ ವಿಜ್ಞಾನಿಗಳ ತೀವ್ರ ಬೆಳವಣಿಗೆ ದಾರ್ಮಿಕ ಮತ್ತು ಆದರ್ಶವಾದಿ ದೃಷ್ಟಿಕೋನವನ್ನು ಛಿದ್ರಗೊಳಿಸುತ್ತಲೆ ಬಂತು. ಅಂತೆಯೆ ಧರ್ಮದ ವಿರುದ್ಧ ಮಾರ್ಕ್ಸ್‌ವಾದಿಗಳಿಗೆ ವಿಜ್ಞಾನದ ಮತ್ತು ಭೌತವಾದದ ಪ್ರಚಾರವು ಒಂದು ಶಕ್ತಿಶಾಲಿ ಅಸ್ತ್ರವಾಗಿದೆ. ಆದರೆ ಧರ್ಮವನ್ನು ಬಹಿಷ್ಕರಿಸುವುದರಿಂದಲೂ, ಪೀಡಿಸುವುದರಿಂದಲೂ, ಧಾರ್ಮಿಕ ಭಾವನೆಗಳು ಅಳಿವಾದಾವು ಎಂದು ಮಾರ್ಕ್ಸ್ ಎಂಗೆಲ್ಸ್‌ರು ಎಚ್ಚರಿಸುತ್ತಾರೆ. ಅಂತೆಯೆ ಧರ್ಮಗಳನ್ನು ಪೋಷಿಸುವ, ರಾಜಕೀಯ ಸಾಮಾಜಿಕ ಪರಿಸ್ಥಿತಿಗಳನ್ನು ಸರ್ವನಾಶ ಮಾಡುವವರಗೆ, ಧರ್ಮವನ್ನು ಕಿತ್ತುಹಾಕಲಾಗುವುದಿಲ್ಲ ಎಂದು ಸ್ಪಷ್ಟಪಡಿಸುತ್ತಾರೆ. ಕಾರ್ಮಿಕವರ್ಗ ತಮ್ಮ ಆರ್ಥಿಕ ರಾಜಕೀಯ ವಿಮುಕ್ತಿಗಾಗಿ ತೊಡಗುವ ಕ್ರಾಂತಿಕಾರಿ ಹೋರಾಟದಲ್ಲಿ. ಧಾರ್ಮಿಕ ವಿಚಾರ, ಮೂಢನಂಬಿಕೆಗಳಿಂದ, ಮುಕ್ತರಾಗುತ್ತಾರೆ. (ಈಗಾಗಲೆ ಗುರುತಿಸಿಕೊಂಡಂತೆ ಭಾರತದಲ್ಲಿ ಕ್ರಾಂತಿಕಾರಿಗಳ ವಿಶೇಷ ಜವಾಬ್ದಾರಿ ಎಂದರೆ,ವರ್ಗಹೋರಾಟಕ್ಕೆ ಪೂರಕವಾಗಿ ಸಾಂದರ್ಭಿಕವಾಗಿ, ಜಾತಿ ಹೋರಾಟಗಳನ್ನು ಅಣಿನೆರೆಯಿಸುವ ಅಗತ್ಯ) ಕಾರ್ಮಿಕರನ್ನು ಭೌತವಾದಿ ದೃಷ್ಟಿಕೋನದಿಂದ ಶಿಕ್ಷಣಕೊಡುತ್ತ ಹೋದ ಹಾಗೆಲ್ಲ ಇದನ್ನು ಪೂರೈಸಬಹುದು. ಕ್ರಾಂತಿಕಾರಿಗಳು ದುಡಿಯುವ ಜನತೆಯ ಮಧ್ಯೆ, ಭೌತವಾದಿ ಸಾಹಿತ್ಯವನ್ನು ನೈಸರ್ಗಿಕ ವಿಜ್ಞಾನಗಳ ಸಾಧನೆಗಳನ್ನು ಹೆಚ್ಚು ಪ್ರಚಾರಮಾಡುವುದರ ಅಗತ್ಯವನ್ನು ಮಾರ್ಕ್ಸ್‌ವಾದ ಒತ್ತಿ ಹೇಳಿದೆ.

(ಹೆಚ್ಚಿನ ಅಭ್ಯಾಸಕ್ಕೆ ಲೆನಿನ್‌ರ ಧರ್ಮದ ಪುಸ್ತಕವನ್ನು ನೋಡಬಹುದು)

—ಸ್ವಾಧಾರ —"on Religion"

—

ಚಂದಾದಾರರು - ಏಜೆನ್ಸಿದಾರರ ಗಮನಕ್ಕೆ

ಪತ್ರಿಕೆಯ ಬಾಕಿ ಹಣವನ್ನು ಕಳುಹಿಸಿ ಕೊಡುವಂತೆ ಚಂದಾದಾರರನ್ನು, ಏಜನ್ಸಿದಾರರನ್ನು ಈಗಾಗಲೇ ಅಂಚೆ ಮೂಲಕ ಅನೇಕ ಸಲ -ವಿನಂತಿಸಿಕೊಂಡಿದ್ದೇವೆ. ಹಣ ಕಳಿಸಿ ಸಹಕರಿಸದೇ ಇದ್ದಲ್ಲಿ ಐಕ್ಯರಂಗವನ್ನು ಉಳಿಸಿ ಬೆಳೆಸಲಾ ಅಶಕ್ಯ.

ಚಂದಾದಾರರ ಅವಧಿ ಮುಗಿಯುವ ಮುನ್ನವೇ ಅವರುಗಳಿಗೆ ಪತ್ರ ಮೂಲಕ ಜ್ಞಾಪಿಸುತ್ತಿದ್ದೇವೆ. ಅನೇಕ ಏಜೆನ್ಸಿದಾರ್ರರು, ಬಿಲ್ ಕಳಿಸಿದ್ದರೂ ಹಣ ಕಳಿಸಿಕೊಡುತ್ತಿಲ್ಲ.

ಇನ್ನು ಮುಂದೆ ನಿಯಮಿತ ಅವಧಿಯೊಳಗೆ ಹಣ ಬಾರದಿದ್ದಲ್ಲಿ ಏಜೆನ್ಸಿದಾರರಿಗೆ ಪತ್ರಿಕೆಗಳನ್ನು ಕಳಿಸಿಕೊಡುವುದನ್ನು ಯಾವುದೇ ಮುನ್ಸೂಚನೆ ಇಲ್ಲದೇ ನಿಲ್ಲಿಸಲಾಗುವದು.

ಜ್ಞಾಪಕ ಪತ್ರ ಬಂದೊಡನೆ ಚಂದಾ ಹಣ ಕೂಡಲೇ ಕಳಿಸುವಂತೆ ಚಂದಾದಾರರನ್ನು ಈ ಮೂಲಕ ವಿನಂತಿಸುತ್ತಿದ್ದೇವೆ. ಇನ್ನು ಮುಂದೆ ರಿಯಾಯತಿ ನೀಡಲು ಸಾಧ್ಯವೇ ಇಲ್ಲ.

ಹೊಸದಾಗಿ ಏಜೆನ್ಸಿದಾರರಾಗ ಬಯಸುವವರು ತಲಾ ಪ್ರತಿಗೆ 3 ರೂ. ಯಂತೆ ಠೇವಣಿ ಕಳಿಸಿ ಬರೆಯಬೇಕು. ಈಗ ಏಜೆನ್ಸಿದಾರರಾಗಿರುವವರು ಪತ್ರಿಕೆಗಳ ಸಂಖ್ಯೆ ಹೆಚ್ಚಿಸಬೇಕೆಂದಿದ್ದಲ್ಲಿ ಹೆಚ್ಚಿನ ಠೇವಣಿ ಕಳಿಸದಿದ್ದಲ್ಲಿ ಅವರ ಕೋರಿಕೆಯನ್ನು ಮನ್ನಿಸಲಾಗುವುದಿಲ್ಲ.

ಐಕ್ಯರಂಗದ ಬ್ಯಾಂಕ್ ಖಾತೆಯು ಬೆಂಗಳೂರಿನ ಬಳೇಪೇಟೆಯ ಸಿಂಡಿಕೇಟ್ ಬ್ಯಾಂಕಿನಲ್ಲಿದೆ. ಖಾತೆ ನಂ. 6944 (SB). ಈ ಖಾತೆಗೆ ನೇರವಾಗಿ ಎಂ. ಟಿ. (Mail Transfer) ಕಳಿಸಬಹುದು. ಇಲ್ಲವೇ ನಮಗೇ ಡಿ.ಡಿ. (Demand Draft) ಯನ್ನಾದರೂ ಕಳುಹಿಸಬಹುದು. ಕಳಿಸುವಾಗ 'ಸಂಪಾದಕ, ಐಕ್ಯರಂಗ' ಇಲ್ಲವೇ 'ವ್ಯವಸ್ಥಾಪಕ ಐಕ್ಯರಂಗ' ಎಂಬ ಹೆಸರಿನಿಂದ ಮಾತ್ರ ಕಳಿಸಬೇಕು.

ವ್ಯವಸ್ಥಾಪಕ

ಐಕ್ಯರಂಗ

ವಿ.ಸೂ. ಐಕ್ಯರಂಗಕ್ಕೆ ವರದಿ ಅಥವಾ ಲೇಖನ ವಗೈರೆ ಕಳಿಸುವದಿದ್ದಲ್ಲಿ ಸಂಪಾದಕ, ಐಕ್ಯರಂಗ ಎಂಬ ವಿಳಾಸಕ್ಕೆ ಮಾತ್ರ ಕಳಿಸಬೇಕು. ಯಾರದೇ ವಯಕ್ತಿಕ ಹೆಸರಿನಿಂದ ಕಳಿಸಬಾರದು.

ಎಲ್‌ಸಾಲ್ವಡೋರ್‌ನಲ್ಲಿ ವಿಯೆಟ್ನಾಂನ ಪುನರಾವರ್ತನೆ

ಸಾಮ್ರಾಜ್ಯಶಾಹಿಯ ಬಿಕ್ಕಟ್ಟು ತೀವ್ರವಾಗುತ್ತಿದೆ; ಅಮೇರಿಕಾ ಸಂಯುಕ್ತ ಸಂಸ್ಥಾನದ ಆರ್ಥಿಕ ವ್ಯವಸ್ಥೆ ಮಿಲಿಟರಿಮಯವಾಗುತ್ತಿದೆ. ನ್ಯೂಟ್ರಾನ್ ಬಾಂಬು ಇದರ ಒಂದು ಬೆಳವಣಿಗೆಯಾದರೆ, ಎಲ್‌ಸಾಲ್ವಡೋರಿನಲ್ಲಿ ಅಮೇರಿಕಾದ ಸಾಮ್ರಾಜ್ಯಶಾಹಿಗಳು ವಾಸ್ತವ ಯುದ್ಧದಲ್ಲಿ ನಿರತರಾಗಿರುವುದು ಇನ್ನೊಂದು ಬೆಳವಣಿಗೆ. ರೇಗನ್ ಸರಕಾರ ಹಬ್ಬಿಸುತ್ತಿರುವ ಸುಳ್ಳಿನ ಸರಮಾಲೆ, ಹಸ್ತಕ್ಷೇಪ, ಸರ್ವಾಧಿಕಾರಿಗಳಿಗೆ ನರಹತ್ಯೆ, ರಕ್ತಪಾತ ಮಾಡಲು ನೀಡುತ್ತಿರುವ ಬೆಂಬಲ, ಇವಕ್ಕೆ ಪ್ರತಿಯಾಗಿ ವಿಮೋಚನಾ ಹೋರಾಟದ ತೀವ್ರತೆ ಇವೆಲ್ಲಾ ವಿಯೆಟ್ನಾಂ ಕ್ರಾಂತಿಕಾರರ ನೆನಪು ಮರುಕಳಿಸುವಂತೆ ಮಾಡುತ್ತಿವೆ.

ಮಧ್ಯ ಅಮೇರಿಕಾ ಪ್ರದೇಶವೆಲ್ಲಾ ಈಗ ವಿಪ್ಲವಮಯವಾಗಿದೆ. ದೀರ್ಘ ಕಾಲದಿಂದ ವಸಾಹತುಶಾಹಿಗಳು, ಸ್ಥಳೀಯ ಶೋಷಕರು ಹಾಗೂ ಸಾಮ್ರಾಜ್ಯಶಾಹಿಗಳ ಕೊಳ್ಳೆಗೆ ತುತ್ತಾದ ಈ ಕ್ಷೇತ್ರ ಜಗತ್ತಿನ ಅತ್ಯಂತ ಹಿಂದುಳಿದ, ಕಡು ಬಡತನದ ಹಾಗೂ ಅತೀವ ದಮನಕ್ಕೊಳಗಾದ ಪ್ರದೇಶ. ಒಂದು ಶತಮಾನದಿಂದ ಈ ಪ್ರದೇಶದ ಜನಸಾಮಾನ್ಯರು ಬಾಳೆಹಣ್ಣು, ಕಾಫಿ, ಹಸಿ, ಕಬ್ಬು ಬೆಳೆಸಿ ಸಾಮ್ರಾಜ್ಯಶಾಹಿಗಳ ಹೊಟ್ಟೆ ಹಾಗೂ ತಿಜೋರಿ ತುಂಬಿಸುತ್ತಿದ್ದಾರೆ. ಪ್ರತಿಯಾಗಿ ತಾವು ಖಾಲೀ ಹೊಟ್ಟೆಯಲ್ಲಿ, ಅಕ್ಷರದ ಗಂಧವಿಲ್ಲದೆ, ರೋಗರುಜನಗಳಿಗೆ ತುತ್ತಾಗಿ ನರಳುತ್ತಿದ್ದಾರೆ. ಅವರ ಈ ನರಳಾಟವೇ ಸಾಮ್ರಾಜ್ಯಶಾಹಿಗಳ ಅಸ್ತಿತ್ವದ ತಳಪಾಯವಾದ್ದರಿಂದ ಈ ನರಳಾಟವನ್ನು ಶಾಶ್ವತವಾಗಿಸಲು ಸಾಮ್ರಾಜ್ಯಶಾಹಿಗಳು ನಡೆಸುತ್ತಾ ಬಂದ ಸೈನಿಕ ಹಸ್ತಕ್ಷೇಪಕ್ಕೆ ದೀರ್ಘ ಇತಿಹಾಸವೇ ಇದೆ.

ಸಮೀಪದ ಕ್ಯೂಬಾದಲ್ಲಿ ಕ್ರಾಂತಿಕಾರಿಗಳು 60ರ ದಶಕದಲ್ಲಿ ಸಾಮ್ರಾಜ್ಯಶಾಹಿಗಳಿಗೆ ಸವಾಲೊಡ್ಡಿ ಜಯಶಾಲಿಗಳಾದುದರ ಪರಿಣಾಮವಾಗಿ ಈ ಪ್ರದೇಶದ ದೇಶಗಳಲ್ಲಿ ಬಂಡಾಯ ಚಟುವಟಿಕೆಗಳು ತೀವ್ರಗೊಂಡವು. 1979ರಲ್ಲಿ ನಿಕಾರಗುವಾದಲ್ಲಿ ನಡೆದ ಸ್ಯಾಂಡಿನಿಸ್ಟಾ ಕ್ರಾಂತಿ, ನಂತರ ಗ್ರೆನಾಡಾದ ಕ್ರಾಂತಿ ಈ ಪ್ರದೇಶದ ಇತರ ದೇಶಗಳಾದ ಎಲ್‌ಸಾಲ್ವಡೋರ್, ಗ್ವಾಟೆಮಾಲಾ, ಹೊಂಡುರಾಸ್ ಹಾಗೂ ಕೋಸ್ಟಾರಿಕಾದಲ್ಲಿನ ಕ್ರಾಂತಿಕಾರೀ ಚಟುವಟಿಕೆಗಳಿಗೆ ಹೊಸ ಸ್ಫೂರ್ತಿ ಕೊಟ್ಟು ಅವು ಈಗ ಭರದಿಂದ ಮುನ್ನಡೆಯುತ್ತಿವೆ. ಇವುಗಳ ಪೈಕಿ ಎಲ್‌ಸಾಲ್ವಡೋರ್ ಕಳೆದೆರಡು ವರ್ಷಗಳಲ್ಲಿ ಅಮಾನುಷ ಹಿಂಸಾಚಾರ, ಬರ್ಬರ ನರಹತ್ಯೆ ಹಾಗೂ ಅದಕ್ಕೆ ಉತ್ತರವಾಗಿ ತೀವ್ರಗೊಳ್ಳುತ್ತಿರುವ ಗೆರಿಲ್ಲಾ ವಿಮೋಚನಾ ಹೋರಾಟದ ಕೇಂದ್ರವಾಗಿ ಕ್ರಾಂತಿಯ ಹೊಸ್ತಿಲಲ್ಲಿ ಬಂದು ನಿಂತಿದೆ.

ಚಾರಿತ್ರಿಕ ಹಿನ್ನೆಲೆ

1822ರವರೆಗೆ ಎಲ್‌ಸಾಲ್ವಡೋರ್ ಸ್ಪೈಯಿನ್‌ನ ವಸಾಹತುವಾಗಿತ್ತು. ಯುದ್ಧಗಳ ಪರಿಣಾಮವಾಗಿ ಸ್ಪೈಯಿನ್‌ನ ಮೂರು ಶತಮಾನಗಳ ವಸಾಹತುಶಾಹಿ ಆಳ್ವಿಕೆಯಿಂದ ಮುಕ್ತಿ ದೊರೆತರೂ ಬಹುಸಂಖ್ಯಾತ ಸಾಲ್ವಡೋರಿಯನ್ನರಿಗೆ ಈ ಮುಕ್ತಿ ಅರ್ಥಹೀನವಾಯಿತು. ಹಿಡಿಯಷ್ಟು ಶ್ರೀಮಂತ ಜಮೀನ್ದಾರರಷ್ಟೇ ಏಳಿಗೆ ಹೊಂದಿದರು. 80 ಶೇಕಡಾ ಸಾಲ್ವಡೋರಿಯನ್ನರು ಕಡು ಬಡವರಾದರು. 95 ಶೇಕಡಾ ಜನ ನಿರಕ್ಷರಿಗಳಾಗಿಯೇ ಉಳಿದರು. ಊಳಿಗಮಾನ್ಯ ಕೃಷೀ ವ್ಯವಸ್ಥೆಯಿಂದಾಗಿ ಆರ್ಥಿಕವಾಗಿ ಯಾವುದೇ ಪ್ರಗತಿ ಸಾಧ್ಯವಾಗಲಿಲ್ಲ. ನಂತರ ಸಾಮ್ರಾಜ್ಯಶಾಹಿಗಳು ಈ ದೇಶದ ಆರ್ಥಿಕತೆಯನ್ನು ಪ್ರವೇಶಿಸಿ ಕಾಫಿ ಬೆಳೆಯ ಏಕಸರಕು ರಫ್ತು ಆಧಾರಿತ ಆರ್ಥಿಕ ವ್ಯವಸ್ಥೆಯನ್ನು ಹುಟ್ಟು ಹಾಕಿದರು. ಸಾಲ್ವಡೋರ್‌ನ ಕಾರ್ಮಿಕರು ಹಾಗೂ ರೈತರು ಕೈಬೆರಳೆಣಿಕೆಯಷ್ಟು ಶ್ರೀಮಂತ ಜಮೀನ್ದಾರರ, ಕೈಗಾರಿಕೋದ್ಯಮಿಗಳ ಹಾಗೂ ಅಮೇರಿಕಾದ ಬಹುರಾಷ್ಟ್ರೀಯ ಕಂಪೆನಿಗಳ ತೋಟಗಳಲ್ಲಿ ದುಡಿಯಲಾರಂಭಿಸಿದರು. 1929-33 ಬಂಡವಾಳಶಾಹಿಗೆ ಜಾಗತಿಕ ಬಿಕ್ಕಟ್ಟಿನ ಸಮಯ. ಆಗ ಮಾರುಕಟ್ಟೆಯಲ್ಲಿ ಕಾಫಿಯ ಬೆಲೆ ತಳ ಮುಟ್ಟಿತು. ಇಂತಹ ಏಕಸರಕು ರಫ್ತು-ಆಧಾರಿತವಾದ ಶೋಷಕ ಅರ್ಥ ವ್ಯವಸ್ಥೆಯಲ್ಲಿ ಆಗುವಂತೆ ಎಲ್‌ಸಾಲ್ವಡೋರ್‌ನ ರೈತರು ಹಾಗೂ ಕಾರ್ಮಿಕರ ತಲೆಯ ಮೇಲೆ ಹೊರಲಾರದ ಹೊರೆಬಿತ್ತು. ವರ್ಗಭೇದ ತೀವ್ರಗೊಂಡಿತು. ಪರಿಣಾಮವಾಗಿ 1931ರ ಹೊತ್ತಿಗೆ ಕಾರ್ಮಿಕರ ಹಾಗೂ ರೈತರ ಸಂಘಟಿತ ಚಳವಳಿ ತೀವ್ರವಾಗಿ ಬೆಳೆಯಿತು.

ಫರಾಬುಂಡೋ ಮಾರ್ಟಿ

1930ರಲ್ಲಿ ಎಲ್‌ಸಾಲ್ವಡೋರ್‌ನ ದೇಶಪ್ರೇಮಿ ನಾಯಕ ಫರಾಬುಂಡೋ ಮಾರ್ಟಿಯವರು ಎಲ್‌ಸಾಲ್ವಡೋರ್ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಿದರು. ಕಾರ್ಮಿಕರಲ್ಲಿ ಹೆಚ್ಚುತ್ತಿದ್ದ ಅಶಾಂತಿಯಿಂದ ಊಳಿಗಮಾನ್ಯ ಹಾಗೂ ಅಮೇರಿಕನ್ ಬಹುರಾಷ್ಟ್ರೀಯ ಸಂಸ್ಥೆಗಳನ್ನು (ಎಲ್‌ಸಾಲ್ವಡೋರ್‌ನ ಕಾಫಿ ತೋಟಗಳೆಲ್ಲಾ ಇವರ ವಶದಲ್ಲಿದ್ದವು) ರಕ್ಷಿಸಲು ಸೈನ್ಯಾಧಿಕಾರಿ ಜನರಲ್ ಮಾರ್ಟಿನೆಝ್ 'ಕ್ಷಿಪ್ರಕ್ರಾಂತಿ' ನಡೆಸಿದ. ವಿರೋಧವಾಗಿ ಹಲವು ಪ್ರಜಾಪ್ರಭುತ್ವವಾದೀ ಪಕ್ಷಗಳು ಸಾರ್ವತ್ರಿಕ ಮುಷ್ಕರಕ್ಕೆ ಸಂಯುಕ್ತವಾಗಿ ಕರೆ ನೀಡಿದವು. ಅದನ್ನು ಅಮಾನುಷವಾಗಿ ಬಗ್ಗುಬಡಿಯಲಾಯಿತು. ಕಾರ್ಮಿಕರ ಸಾಮೂಹಿಕ ವಜಾ, ಕೂಲಿಯಲ್ಲಿ ಕಡಿತ, ರೈತರಿಗೆ ಕಿರುಕುಳ ಎಲ್ಲಾ ವಿಪರೀತಗೊಂಡವು. ಅನ್ಯಮಾರ್ಗವಿಲ್ಲದೆ ಕಮ್ಯುನಿಸ್ಟ್ ಪಕ್ಷ ಹಾಗೂ ಇತರ ಕ್ರಾಂತಿಕಾರೀ ಗುಂಪುಗಳು 1932ರ ಜನವರಿ 22 ರಂದು ದಂಗೆಯೇಳಲು ಜನತೆಗೆ ಕರೆ ನೀಡಿದವು. ಫರಾಬುಂಡೋ ಮಾರ್ಟಿ ಹಾಗೂ ಇತರ ಕಮ್ಯುನಿಸ್ಟ್ ನಾಯಕರನ್ನು ಮಿಲಿಟರಿ ಸರಕಾರ ಬಂಧಿಸಿ ಫೆಬ್ರವರಿ 1 ರಂದು ಗಲ್ಲಿಗೇರಿಸಿತು. ನಂತರ ಎಡಪಂಥೀಯರ ಸಂಘಟನೆಗಳನ್ನು, ನಾಯಕರನ್ನು ನಿರ್ನಾಮಮಾಡಿ, 30 ಸಾವಿರ ಸಾಲ್ವಡೋರಿಯನ್ನರ ಕಗ್ಗೊಲೆ ನಡೆಸಿ ಈ ಮಿಲಿಟರಿ ಸರ್ವಾಧಿಕಾರ 1960ರವರೆಗೆ ಎಲ್‌ಸಾಲ್ವಡೋರನ್ನು ಅಮೇರಿಕನ್ ಸಾಮ್ರಾಜ್ಯಶಾಹಿಗಳಿಗೆ 'ಸುರಕ್ಷಿತ'ಗೊಳಿಸಿತು!

1960ರಲ್ಲಿ ಕ್ಯೂಬಾದಲ್ಲಾದ ಕ್ರಾಂತಿಯಿಂದ ಸ್ಫೂರ್ತಿಗೊಂಡ ಕೆಲವು ಪ್ರಗತಿಶೀಲ ಸೈನ್ಯಾಧಿಕಾರಿಗಳು ಕೆಲವು ಬೂರ್ಜ್ವಾ ಪಕ್ಷಗಳ ಸಹಕಾರದಿಂದ ಕ್ಷಿಪ್ರಕ್ರಾಂತಿ ನಡೆಸಿ ಈ ಸರ್ವಾಧಿಕಾರವನ್ನು ಕೊನೆಗೊಳಿಸಿದರು. ಆದರೆ ಇದು ಬಹಳ ದಿನ ಉಳಿಯಲಿಲ್ಲ. ಕ್ಯೂಬಾದ ಕ್ರಾಂತಿಯ ಪ್ರಭಾವ ಈ ಕ್ಷೇತ್ರದ ಇತರ ದೇಶಗಳನ್ನು ತಲುಪದಂತೆ ನೋಡಿಕೊಳ್ಳಲು ಕೆಲವು ತೋರಿಕೆಯ ಸುಧಾರಣೆಗಳ 'ಪ್ರಗತಿಗಾಗಿ ಸಖ್ಯ' ಎಂಬ ಯೋಜನೆ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಕೃಪಾ ಛತ್ರದಡಿ ಈ ಪ್ರದೇಶದಲ್ಲಿ ಆರಂಭವಾಯಿತು. ಇದರ ಫಲವಾಗಿ ಅಮೇರಿಕನ್ ಬೆಂಬಲಿಗ ಸೈನ್ಯಾಧಿಕಾರಿಗಳು ಹಾಗೂ ನಾಗರಿಕರಿದ್ದ ಜಂಟೀ ಆಡಳಿತ 1961ರಲ್ಲಿ ಅಧಿಕಾರಕ್ಕೆ ಬಂತು. ಆದರೆ ಎಲ್‌ಸಾಲ್ವಡೋರ್‌ನ ಆಳುವ ವರ್ಗಗಳಿಗೆ ಈ ತೋರಿಕೆಯ ಸುಧಾರಣೆಗಳ ಪರದೆ ಕೂಡಾ ಅನಗತ್ಯವಾಗಿಕಂಡುದುದರಿಂದ 1962ರಲ್ಲಿ ಕಾಫಿ ಪ್ಲಾಂಟರುಗಳು ಹಾಗೂ ಸೈನ್ಯಾಧಿಕಾರಿಗಳ ಪಕ್ಷ NRP ಅಧಿಕಾರ ಕಿತ್ತುಕೊಂಡಿತು. ಅಂದಿನಿಂದ ಇಂದಿನವರೆಗೆ ಚುನಾವಣೆಯ ನಾಟಕ ನಡೆಯುತ್ತಾ ಬಂದಿದೆ. ಇತ್ತೀಚೆಗೆ ಮಾರ್ಚ್ 28 ರಂದು ರೇಗನ್ ಸರಕಾರದ ನಿರ್ದೇಶನದಲ್ಲಿ ಇಂತಹದೊಂದು ನಾಟಕ ನಡೆಯಿತು. ವಿಪರ್ಯಾಸವೆಂದರೆ ಈಗಿನ ಕೈಗೊಂಬೆ ಅಧ್ಯಕ್ಷ ನೆಪೋಲಿಯನ್ ಡುವಾರ್ಟೆ ಈ ಹಿಂದೆ ಇಂತಹ ಚುನಾವಣೆಯ ಅಭ್ಯರ್ಥಿಯಾಗಿದ್ದಾಗ ಇವರನ್ನು ಈ ಪಕ್ಷ ದೇಶ ಬಿಟ್ಟೋಡಿಸಿತ್ತು!

(ಮುಂದುವರಿಯುವುದು)

ರೈತ ಸಂಘದ ಉದ್ಘಾಟನೆ

20-4-82 ರಂದು ದ. ಕ. ಜಿಲ್ಲಾ ಕುಂದಾಪುರ ತಾಲ್ಲೂಕು ಹೊಸಂಗಡಿಯ ಎಡಮಣಿ ಗ್ರಾಮದ ರೈತರ ಸಭೆಯು ನಡೆಯಿತು. ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಂ| ಅಬ್ರಹಾಂ ಕರ್ಕಡ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ರೈತ ಸಂಘದ ಘಟಕವನ್ನು ಉದ್ಘಾಟಿಸಿದರು.

ಕುಂದಾಪುರ ತಾಲ್ಲೂಕಿನ ಈ ಗ್ರಾಮ ಎಡಮಗೆಯಲ್ಲಿ ಹಿಂದುಳಿದ ವರ್ಗದ ಕುಡುಬಿ ಜನಾಂಗದವರೇ ಅಧಿಕ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ಈ ಹಳ್ಳಿಯ ಬಡರೈತರು – ಕೃಷಿ ಕೂಲಿಕಾರರು ಸಂಘಟನೆಯಾಗಲು ಮುಂದಾದ ಬಗ್ಗೆ ಕಾಂ| ಅಬ್ರಹಾಂ ಕರ್ಕಡ್‌ರು ಮೆಚ್ಚುಗೆ ಸೂಚಿಸಿ, ಭೂಮಾಲೀಕರ ಕಿರುಕುಳದ ವಿರುದ್ಧ ನ್ಯಾಯಕ್ಕಾಗಿ ಹೋರಾಟ ಮಾಡಬೇಕೆಂದು ಕರೆ ಇತ್ತರು.

ಸಭೆಯಲ್ಲಿ, 15 ಸದಸ್ಯರಿರುವ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಕಿಟ್ಟ ನಾಯಕ್ ಅಧ್ಯಕ್ಷರಾಗಿಯೂ, ಶಿವರಾಮಶೆಟ್ಟಿ ಕಾರ್ಯದರ್ಶಿಯಾಗಿ ಆಯ್ಕೆಯಾದರು. ನಂತರ ಸಭೆಯನ್ನುದ್ದೇಶಿಸಿ ತಾಲ್ಲೂಕು ರೈತ ಸಂಘದ ಜೊತೆ ಕಾರ್ಯದರ್ಶಿ ಕಾಂ| ಕೆ. ವೆಂಕಟೇಶ ನಾಯಕ್ ಮತ್ತು ರೈತ ಸಂಘದ ಜಡ್ಕಲ್ ಘಟಕದ ಕಾರ್ಯದರ್ಶಿ ಬಸವನಾಯ್ಕ ಮಾತನಾಡಿದರು.

—

ವಾರ್ಷಿಕ ಮಹಾಸಭೆ

ಎ. 18 ರಂದು ಉಡುಪಿಯ 'ಬೀಡಿ ಆ್ಯಂಡ್ ಟೊಬೇಕೊ ಲೇಬರ್ ಯೂನಿಯನ್ನಿನ ವಾರ್ಷಿಕ ಮಹಾಸಭೆಯು ಉಡುಪಿಯ ಗುಂಡಿಬೈಲು ಶಾಲೆಯ ವಠಾರದಲ್ಲಿ ಸೇರಿತ್ತು. ಅಧ್ಯಕ್ಷತೆಯನ್ನು ಕಾಂ| ಕಾಳಪ್ಪಶೆಟ್ಟಿ ವಹಿಸಿದ್ದರು.

ಕಾರ್ಯದರ್ಶಿ ಎಸ್. ಸಾಧು ಅಮೀನರು ವಾರ್ಷಿಕ ವರದಿಯನ್ನು, ಕೋಶಾಧಿಕಾರಿ ಕಾಂ| ಕೆ. ಲಕ್ಷ್ಮಣ ಅವರು ಲೆಕ್ಕಪತ್ರವನ್ನು ಸಭೆಯಲ್ಲಿ ಮಂಡಿಸಿದರು. ಕಾಂ| ಕೆ. ಮುಕುಂದನ್ ಸಭೆಗೆ ಶುಭಾಷಯ ಕೋರಿ ಮಾತನಾಡಿದರು.

ಸಿ.ಐ.ಟಿ.ಯು. ಮುಂದಾಳು ಕಾಂ| ಅಬ್ರಹಾಂ ಕರ್ಕಡ್ ಅವರು ಸಭೆಯನ್ನುದ್ದೇಶಿಸಿ ಮಾತನಾಡಿ, ಬೀಡಿ ಕಾರ್ಮಿಕರ ಸಮಸ್ಯೆ ಬಗೆಹರಿಯಬೇಕಾದರೆ ಪ್ರಬಲ ಸಂಘಟನೆ ಮತ್ತು ತೀವ್ರ ಹೋರಾಟ ಅತ್ಯವಶ್ಯವೆಂದರು.

ಮುಂದಿನ ವರ್ಷಕ್ಕೆ ಅಧ್ಯಕ್ಷರಾಗಿ ಕಾಂ| ಸಿ. ಕಾಳಪ್ಪಶೆಟ್ಟಿ, ಗುರುರಾಜ ಸೆಟ್ಟಿಗಾರ ಮತ್ತು ಶ್ರೀಮತಿ ಬೇಬಿ ಉಪಾಧ್ಯಕ್ಷರುಗಳಾಗಿ, ಎಸ್. ಸಾಧು ಅಮೀನ್ ಕಾರ್ಯದರ್ಶಿಯಾಗಿ, ಗುರುವ ಪೂಜಾರಿ ಮತ್ತು ಜಲಜ ಜೊತೆ ಕಾರ್ಯದರ್ಶಿಗಳಾಗಿ, ಕೋಶಾಧಿಕಾರಿಯಾಗಿ ಕಾಂ| ಕೆ. ಲಕ್ಷ್ಮಣ ಇವರುಗಳುಳ್ಳ ಒಟ್ಟು 19 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

ಆರಂಭದಲ್ಲಿ ಗುರುರಾಜ್ ಸೆಟ್ಟಿಗಾರ್ ಸ್ವಾಗತಿಸಿ, ಕೊನೆಯಲ್ಲಿ ಗುರುವ ಪೂಜಾರಿ ವಂದಿಸಿದರು.

ಕೇರಳ

ಕಾವೇರುತ್ತಿರುವ ಚುನಾವಣಾ ಕಣ

ಮೇ 19 ರಂದು ನಡೆಯಲಿರುವ ಚುನಾವಣೆಯಲ್ಲಿ ಎಡ-ಪ್ರಜಾಪ್ರಭುತ್ವ ರಂಗ (ಎಲ್.ಡಿ.ಎಫ್.)ವು ಅತ್ಯಧಿಕ ಬಹುಮತದಿಂದ ಆರಿಸಿ ಬರುವದಾಗಿ ರಂಗದ ಸಂಚಾಲಕ ಕಾಂ। ವಿ. ವಿ. ಕುಞ್ಞಿಕಣ್ಣನ್ ಅಭಿಮತ ವ್ಯಕ್ತಪಡಿಸಿದ್ದಾರೆ. ಕಾಂ। ಕುಞ್ಞಿಕಣ್ಣನ್ ಪತ್ರಿಕಾಗೋಷ್ಠಿಯುಂದೊನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಅವರು 139 ಕ್ಷೇತ್ರಗಳ ವಿವರಗಳನ್ನು ತಿಳಿಸಿ ಪ್ರತಿಯೊಂದು ಪಕ್ಷವೂ ಸ್ಪರ್ಧಿಸುವ ಸಂಖ್ಯೆಯನ್ನೂ ತಿಳಿಸಿದರು. ಸಿ.ಪಿ.ಐ.(ಎಂ)--59, ಸಿ.ಪಿ.ಐ.—26, ಕಾಂಗ್ರೆಸ್ (ಎಸ್)—18, ಜನತಾ ಪಕ್ಷ—14, ಅಖಿಲ ಭಾರತ ಮುಸ್ಲಿಂ ಲೀಗ್—12, ಆರ್. ಎಸ್.ಪಿ.—8, ಡಿ.ಎಸ್.ಸಿ.—1, ಕೇರಳ ಕಾಂಗ್ರೆಸ್ (ಎಸ್)-1,

ಕಾಂ। ಇ. ಕೆ. ನಾಯನಾರ್ ಮಲಂಪುಲ ಕ್ಷೇತ್ರದಿಂದ, ಟಿ.ಕೆ.ರಾಮಕೃಷ್ಣನ್ ತ್ರಿಪುಣಿತುರದಿಂದ, ಕೆ.ಆರ್. ಗೌರಿಯಮ್ಮ ಅದೂರ್ ಕ್ಷೇತ್ರದಿಂದಲೂ, ಪಿ. ಕೆ. ವಾಸುದೇವನ್ ನಾಯರ್ ಆಲಪ್ಪಿಯಿಂದ, ಎಂ. ವಿ. ರಾಘವನ್ ಕಣ್ಣನ್ನೂರಿನ ಪಯನ್ನೂರ್ ನಿಂದ, ಸಿ. ಎಂ. ಅಬ್ಬುಬಕರ್ ಕಲ್ಲಿಕೋಟೆ—2 ನಿಂದ ಸ್ಪರ್ಧಿಸುತ್ತಿದ್ದಾರೆ.

ಪರಾಜಿತನಾಗುವ ಭೀತಿಯಿಂದ ಕಾಂಗ್ರೈ ನಾಯಕ ಕೆ. ಕರುಣಾಕರನ್ ಈ ಸಲ ಎರಡು ಕ್ಷೇತ್ರಗಳಿಂದ ಸ್ಪರ್ಧಿಸುತ್ತಿದ್ದಾರೆ. ಒಂದು ಮಾಳ ಕ್ಷೇತ್ರ. ಅಲ್ಲಿ ಅಷ್ಟು ಸುರಕ್ಷಿತವಲ್ಲವೆಂದು ತಿಳಿದು (ಏಕೆಂದರೆ ಅಲ್ಲಿ ಇವರನ್ನು ಎದುರಿಸುತ್ತಿರುವ ಅಭ್ಯರ್ಥಿ ಸಿ.ಪಿ.ಐ. ನಾಯಕ ಇ. ಗೋಪಾಲ್‌ಕೃಷ್ಣ ಮೇನನ್) ಮತ್ತೊಂದು ಕ್ಷೇತ್ರ ನೇಮಂ. ಅಲ್ಲಿ ಅಲ್ಲಿ ಅವರನ್ನು ಎದುರಿಸುತ್ತಿರುವವರು ನೇಮಂ ಜನರ ಅಚ್ಚುಮೆಚ್ಚಿನ ನಾಯಕ, ಸ್ವಾತಂತ್ರ್ಯ ಹೋರಾಟಗಾರ ಕಾಂ। ಫಖೀರಖಾನ್ [ಸಿ.ಪಿ.ಐ.(ಎಂ)].

ಎಡ ಮತ್ತು ಪ್ರಜಾಪ್ರಭುತ್ವ ರಂಗ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಜನಸಾಮಾನ್ಯರ ಕಲ್ಯಾಣಕ್ಕಾಗಿ 21 ಅಂಶಗಳ ಕಾರ್ಯಕ್ರಮವನ್ನೊಳಗೊಂಡ ಚುನಾವಣಾ ಪ್ರಣಾಳಿಕೆ ಹೊರಡಿಸಿದೆ. ಈ ಪ್ರಣಾಳಿಕೆಯ ಮುಖ್ಯಾಂಶ ಈ ರೀತಿ ಇದೆ : ಕೃಷಿ ಕೂಲಿಕಾರರಿಗೆ ನಿವೃತ್ತಿ ವೇತನ, ನಿರುದ್ಯೋಗ ವೇತನ, ಪೌರ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವ ಹಕ್ಕನ್ನು ರಕ್ಷಿಸಲು ಹೋರಾಡುವದು, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಪುನಃ ಜಾರಿಗೆ ತರುವದು, ಹರಿಜನ - ಗಿರಿಜನ ಉದ್ಧಾರಕ್ಕಾಗಿ ಹೆಚ್ಚಿನ ಸೌಲಭ್ಯಗಳು ಇತ್ಯಾದಿ.

ಒಂದು ಕಡೆ ಎಡ ಮತ್ತು ಪ್ರಜಾಪ್ರಭುತ್ವ ರಂಗದ ನಾಯಕರು ಆತ್ಮವಿಶ್ವಾಸದಿಂದ ಚುನಾವಣಾ ಕಣಕ್ಕಿಳಿದು ಪ್ರತಿಯೊಂದು ಜಿಲ್ಲೆಯಲ್ಲೂ ಎಡ ಮತ್ತು ಪ್ರಜಾಪ್ರಭುತ್ವರಂಗದ ನೇತೃತ್ವದಲ್ಲಿ ಸಮಾವೇಶವನ್ನು ನಡೆಸಿ ಜನರನ್ನು ಜಾಗೃತಿಗೊಳಿಸುತ್ತಿರುವಾಗ, ಮತ್ತೊಂದು ಕಡೆ —ಕಾಂಗ್ರೈನ ಸಂಯುಕ್ತರಂಗ ದಿಕ್ಕೆಟ್ಟು ಕಂಗಾಲಾಗಿ ಅವರು ಸ್ಪರ್ಧಿಸಿರುವ ಅನೇಕ ಕ್ಷೇತ್ರಗಳಲ್ಲಿ ಅವರ ಪಕ್ಷದವರೇ ಅಭ್ಯರ್ಥಿಗಳಾಗಿದ್ದಾರೆ. ಆಲಪ್ಪಿ ಜಿಲ್ಲೆಯಲ್ಲಿ ಜೋಸಫ್ ಗ್ರೂಪಿಗೆ ವಿರುದ್ಧವಾಗಿ ಮಾಣಿ ಕಾಂಗ್ರೆಸ್‌ನವರೂ, ಎರ್ನಾಕುಲಂ ಜಿಲ್ಲೆಯಲ್ಲಿ ಕಾಂಗ್ರೈ ಅಭ್ಯರ್ಥಿಗಳ ವಿರುದ್ಧವಾಗಿ ಕಾಂಗ್ರೈನವರೇ ಸ್ಪರ್ಧಿಸುತ್ತಿದ್ದಾರೆ ಕೊಟ್ಟಾಯಂ, ಕೊಲ್ಲಂ, ಮಲಪುರಂ ಜಿಲ್ಲೆಗಳ ಅನೇಕ ಕ್ಷೇತ್ರಗಳಲ್ಲಿ ಕಾಂಗ್ರೈನ ಉಮೇದುವಾರರೆದುರಾಗಿ ಕಾಂಗ್ರೈನ ಅನೇಕ 'ರೆಬೆಲ್' (ಬಂಡಾಯ) ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ. ನಾಯನಾರ್ ಮಂತ್ರಿ ಮಂಡಲವನ್ನು ಉರುಳಿಸಲು ಕಾರಣವಾದ ಅಂತೋಣಿ ಪಕ್ಷದ ಸ್ಥಿತಿಯಂತೂ ಹೇಳ ತೀರದು. ಹೀಗಾಗಿ ಎಲ್ಲೆಲ್ಲೂ ಯಾರು ಯಾರು ಅವರ ರಂಗದಿಂದ ಸ್ಪರ್ಧಿಸುತ್ತಿದ್ದಾರೆಂದು ಕರುಣಾಕರರಿಗೇ ಗೊತ್ತಿಲ್ಲದ ಪರಿಸ್ಥಿತಿ ಉಂಟಾಗಿದೆ.

ಬಿರುಸಾಗಿ ನಡೆದಿರುವ ಎಡ-ಪ್ರಜಾಪ್ರಭುತ್ವರಂಗದ ಚುನಾವಣಾ ಪ್ರಚಾರ ಕಾರ್ಯಕ್ರಮವನ್ನು ಕಾಂ॥ ಇ. ಎಂ. ಎಸ್. ನಂಬೂದಿರಿಪಾಡ್‌ರವರು ನೆರವೇರಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಎಡ-ಪ್ರಜಾಪ್ರಭುತ್ವ ರಂಗದ ಕಾರ್ಯಕರ್ತರು, ರಂಗ ಜಯಶಾಲಿಯಾಗುವಂತೆ ಅವಿರತ ಶ್ರಮಿಸಬೇಕೆಂದು ಕರೆ ನೀಡಿದರು. ಮನೆ, ಮನೆಗಳಿಗೆ ಭೇಟಿನೀಡಿ ಪ್ರತಿಯೊಬ್ಬ ಮತದಾರನನ್ನೂ ಕಾಣಬೇಕು. ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಪ್ರತಿಗಾಮಿ ಶಕ್ತಿಗಳ ವಿರುದ್ಧ ಮತದಾನ ಮಾಡುವಂತೆ ಜನತೆಗೆ ತಿಳಿಹೇಳಬೇಕು. ಈ ಕೆಲಸ ಚುರುಕಾಗಿ ನಡೆದರೆ ಎಡ-ಪ್ರಜಾಪ್ರಭುತ್ವ ರಂಗ ವಿಜಯಿಯಾಗುವುದರಲ್ಲಿ ಸಂಶಯವಿಲ್ಲ ಎಂದು ಕಾಂ। ಇ. ಎಂ. ಎಸ್. ತಿಳಿಸಿದರು.

ಎಲ್ಲಾ ಪಟ್ಟಭದ್ರ ಹಿತಾಸಕ್ತಿಗಳು, ಅವರ ಬೆಂಬಲಿಗನಾದ ಕೇಂದ್ರ ಸರಕಾರ ಹಾಗೂ ಕೇಂದ್ರ ಸರಕಾರದ ಕೈಗೊಂಬೆಯಾಗಿ ವರ್ತಿಸುವ ರಾಜ್ಯಪಾಲರ ಆಡಳಿತ ಇವುಗಳ ಸಂಯುಕ್ತ ವಿರೋಧವನ್ನು ಎದುರಿಸಿ ನಡೆಯಲಿರುವ ಈ ಚುನಾವಣೆಯ ಫಲಿತಾಂಶವನ್ನು ದೇಶದ ಜನತೆ ಕುತೂಹಲದಿಂದ ಕಾಯುತ್ತಿದ್ದಾರೆ.

—

ಎರಡು ನಿಮಿಷ

(3ನೇ ಪುಟದಿಂದ)

ಅವನು ತಾನು ಕುಳಿತಿದ್ದ ಸ್ಟೂಲನ್ನು ಕೋಣೆಯ ಮಧ್ಯಭಾಗಕ್ಕೆ ಎಳೆದುಕೊಂಡು ಹೋಗಬೇಕೆಂದುಕೊಂಡ. ಅದರ ಮೇಲೆ ನಿಂತುಕೊಳ್ಳುವುದು—ಇನ್ನೇನು ಓಡಲಿರುವ ಓಟಗಾರನ ಹಾಗೆ, ಕಾಲೂರಿ, ಮುಂದೆ ಬಾಗಿ. ಆಮೇಲೆ, ಒಂದು ಕೈಯನ್ನು ಮೇಲೆ ಚಾಚಿ, ಚಿಮ್ನಿ ನೆಗೆಯುವುದು ...ಅನೇಕ ಬಾರಿ ಪ್ರಯತ್ನಪಟ್ಟ ಬಳಿಕ, ಆ ಬಲ್ಬ್ ಕೈಗೆ ಸಿಗಬಹುದು ...ಗಾಜಿನ ಚೂರುಗಳು ಬ್ಲೇಡಿನಷ್ಟೇ ಹರಿತವಾಗಿರುತ್ತವೆ....ಅವನು ಹೆಬ್ಬೆರಳಿನಿಂದ ತನ್ನ ನಾಡಿ ಬಡಿತವನ್ನು ನೋಡಿಕೊಂಡ. ಅದು ಅವನನ್ನು ವಸ್ತುಸ್ಥಿತಿಗೆ ಹಿಂತಿರುಗಿ ತಂದಿತು.

ಗೆರ್‌ಮರ್ ಎದ್ದು ನಿಂತ. ತನ್ನ ಕೋಠಡಿಯಲ್ಲೇ ಈ ಕಡೆಯಿಂದ ಆಕಡೆ, ಆ ಕಡೆಯಿಂದ ಈ ಕಡೆ ಶತಪಥ ಹಾಕಲು ಪ್ರಾರಂಭಿಸಿದ. ಮನಸೆಳೆಯುವ ಆತ್ಮಹತ್ಯೆಯ ಆಲೋಚನೆಗಳನ್ನು ಹತ್ತಿಕ್ಕಲು ಯತ್ನಿಸಿದ. ಅವು ಏಕೆ ತನ್ನನ್ನು ಪೀಡಿಸುತ್ತಿವೆಯೆಂದು ಅವನಿಗೆ ಗೊತ್ತು. ಚಿತ್ರಹಿಂಸೆಗೆ ಗುರಿಯಾದ ಶರೀರ ಮನಸ್ಸಿನಿಂದ ಯಾವುದಾದರೊಂದು ರೀತಿಯಲ್ಲಿ ಬಿಡುಗಡೆ ಪಡೆಯಲು ಅವನು ಬಯಸುತ್ತಿದ್ದ.

"...ಒಂದೋ ನೀನು ಮಾತಾಡ್ತಿ, ಇಲ್ಲವಾದ್ರೆ ನಾನು ನಿನ್ನನ್ನ ಕೊಲ್ತೇನೆ."

"...ನೀನು ಹೆದರಬೇಡ. ಕ್ರಿಸ್‌ಮಸ್ ಹಬ್ಬಕ್ಕೆ ನಾನು ಮನೆಗೆ ಬರ್‍ತೀನೆ." ಗೆರ್‌ಮರ್‌ನನ್ನು ಮುಳುಗಿಸಿಬಿಡುವಂತೆ ತೋರಿದ ಭಾವನೆಗಳ ಸುಳಿಯಲ್ಲಿ ಈ ಪದಗಳು ಈಜಾಡತೊಡಗಿದವು. ಆದರೆ ಅವನು ತನ್ನ ಸಮಸ್ತ ಇಚ್ಛಾಶಕ್ತಿಯನ್ನೂ ಉಪಯೋಗಿಸಿ ಈ ವಿನಾಶಕಾರೀ ಪರಿಸ್ಥಿತಿಯಿಂದ ಹೊರಗೆ ಬಂದ. ದೀಪವನ್ನು ಚೂರುಮಾಡಿ, ಚುಚ್ಚಿಕೊಂಡು, ಸಾಯುವ ಕಡೆಗೆ ಮನಸ್ಸನ್ನು ಸೆಳೆಯುವ ಇಂತಹ ಆಲೋಚನೆಗಳಿಂದ ತಾನು ದೂರವಿರಬೇಕು ಎಂದುಕೊಂಡ.

ಇದೆಂಥ ದರಿದ್ರ, ಸುಡುಗಾಡು ಮೌನ-ಅವನು ಅವಲೋಕಿಸಿದ-ಯಾಕೆ ಯಾವನೊಬ್ಬನಾದರೂ ಚೀರುತ್ತಿಲ್ಲ? ಈ ಬಾಗಿಲನ್ನು ಜೋರಾಗಿ ತಟ್ಟುತ್ತಿಲ್ಲ? ಹೊರಗೆ! ನಮ್ಮನ್ನು ಹೊರಗೆ ಬಿಡಿ.

ಗೂಡಿನ ಮಧ್ಯೆ ನಿಂತಿದ್ದ ಗೆರ್‌ಮರ್ ಇದ್ದಕ್ಕಿದ್ದಂತೆ ಜೋರಾಗಿ ನಕ್ಕ. ಅರ್ಥವಿಲ್ಲದ ಬೊಗಳುನಗೆ. ತೆರೆದ ಗಾಯವನ್ನು ಸೀಳಿಕೊಂಡು ಬರುವ ಹಾಗೆ ಬಂತು. ಅವನ ಬಾಯಿಂದ ಆ ನಗು.

"ಕ್ರಿಸ್‌ಮಸ್ ಹಬ್ಬ! ಬಂದಿದೆ ಕ್ರಿಸ್‌ಮಸ್ ಹಬ್ಬ!" ಅವನು ಕೂಗಿದ. ಪೇಟೆಯ ಮಧ್ಯೆ ಡಂಗುರ ಬಾರಿಸುವವನಂತೆ.

ಕ್ರಮೇಣ ಆ ನಗು, ನೋವು ತುಂಬಿದ, ಎದೆ ಸೀಳುವ ಆರ್ತನಾದವಾಯಿತು. ಗೆರ್‌ಮರ್ ಗೋಡೆಯ ಕಡೆಗೆ ತಿರುಗಿದ. ಅದರ ಹತ್ತಿರ ಹೋಗಿ ತನ್ನ ಹಣೆಯನ್ನು ಗೋಡೆಗೆ ಎತ್ತಿಕೊಂಡು ಅಳತೊಡಗಿದ.

ಆ ಅಳು ಎಷ್ಟು ಹಿತಕರವಾಗಿತ್ತು.. ಬೆಚ್ಚನೆಯ ಮಳೆಯ ಹಾಗೆ, ಅವನ ಶರೀರದಿಂದ ನೋವು ನಿರ್ಗಮಿಸಿತು. ದೊಡ್ಡ ಎತ್ತರದ ಗಾತ್ರದ ಆ ಬಲಿಷ್ಠ ಗಂಡಸು ಮಗುವಿನ ಹಾಗೆ ಅತ್ತ.

"ನಾನು ಅಳ್ತಾ ಇದೇನೆ. ಯಾಕೇ ಅಂದರೆ ಅತ್ತರೆ ನನಗೆ ಏನೋ ಸಮಾಧಾನ...ಯಾಕೇ ಅಂದರೆ ಈ ದಿನ ಕ್ರಿಸ್‌ಮಸ್. ನನಗೆ ಇವತ್ತು ನಿಮ್ಮ ಜೊತೆ ಮನೇಲಿ ಇರಬೇಕೂಂತ ಆಸೆ ಇತ್ತು. ನನ್ನ ಮೇಲೆ ಕೋಪ ಮಾಡ್ಕೊಬೇಡಿ...ನನಗೆ ಬರೋದಕ್ಕೆ ಆಗ್ತಾ ಇಲ್ಲ...ನನಗೆ ಬರೋದಕ್ಕೆ ತುಂಬಾ ಇಷ್ಟ.ತುಂಬಾ ತುಂಬಾ ಇಷ್ಟ. ಆದರೆ ನಾನು ಬರಲಾರೆ..."

ಇದ್ದಕ್ಕಿದ್ದಂತೆ ಕಬ್ಬಿಣದ ಬಾಗಿಲಿನ ಶಬ್ದ. ಬೀಗದ ಕೈ ಎರಡು ಸಲ ತಿರುಗಿತು. ಬಾಗಿಲಿನಲ್ಲಿ ಕಾವಲುಗಾರ.

ಗೆರ್‌ಮರ್ ಹಿಂದೆ ತಿರುಗಿದ, ಅವನನ್ನು ದಿಟ್ಟಿಸಿದ. ಭಯ ತುಂಬಿದ ನೋಟ.

"ಬಾ" ಅಷ್ಟೇ ಆ ಕಾವಲುಗಾರ ಹೇಳಿದ್ದು.

ತನ್ನನ್ನು ತಾನು ಸ್ವಾಧೀನಕ್ಕೆ ತಂದುಕೊಳ್ಳಲು ಗೆರ್‌ಮರ್‌ಗೆ ಒಂದು ಕ್ಷಣ ಬೇಕಾಯಿತು. ಅವನ ಆಲೋಚನೆಗಳು ಇನ್ನೂ ಅಲ್ಲಿ ಇಲ್ಲಿ ಹರಿದಾಡುತ್ತಿದ್ದವು. ಅವನು ಯಾಂತ್ರಿಕವಾಗಿ ತನ್ನ ಜಾಕೆಟ್ ಗುಂಡಿಗಳನ್ನು ಹಾಕಿಕೊಂಡ, ಗೂಡಿನಿಂದ ಹೊರಗಡೆ ಹೆಜ್ಜೆಯಿಟ್ಟ. ಅವರು ಮೌನವಾಗಿ ಗೂಡುಗಳ ಮುಂದಣ ಓಣಿಯಲ್ಲಿ ನಡೆದರು. ಕಬ್ಬಿಣದ ಮೆಟ್ಟಲುಗಳನ್ನು ಇಳಿದರು ನೆಲಮಟ್ಟಕ್ಕೆ ಬಂದರು.

'ಓಹೋ ಹೆಡಿ ಬಂದಿದಾಳೆ' ಎಂದುಕೊಂಡ ಗೆರ್‌ಮರ್. ತಾನು ಹಿಂದಿನ ಸಲ ಅವಳನ್ನು ನೋಡಿದ ಸಿಹಿನೆನಪನ್ನು ಅವನ ಹೃದಯ ಇನ್ನೂ ಪ್ರತಿಧ್ವನಿಸುತ್ತಿತ್ತು.

ಮತ್ತೊಬ್ಬ ಕಾವಲುಗಾರ ಅವನನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋದ. ಆ ದಾರಿ ಗೆರ್‌ಮರ್‌ಗೆ ಗೊತ್ತಿತ್ತು. ಏಕೆಂದರೆ ಎಷ್ಟೋ ಸಲ ಅವನನ್ನು ಪ್ರಶ್ನಿಸಲೆಂದು ಅಲ್ಲಿಗೆ ಕರೆದುಕೊಂಡು ಹೋಗಿದ್ದರು. ಆದರೆ ಈ ಸಲ ಅವನು ಅಲ್ಲಿಗೆ ಸಂತೋಷವಾಗಿಯೇ ಹೋದ. ಏಕೆಂದರೆ ಅವನ ಮನಸ್ಸಿನಲ್ಲಿ ಏನೋ ಉಲ್ಲಾಸ. ಏನೋ ಸುಮಧುರ ನಿರೀಕ್ಷೆ. ಹೆಡಿ ಬಂದಿರಬೇಕು. ಈಗ ಅವನಿಗೆ ಅದರ ಬಗ್ಗೆ ಅನುಮಾನವೇ ಇರಲಿಲ್ಲ. ಆದರೆ ಅವನನ್ನು ಕರೆದುಕೊಂಡು ಹೋದ ಕೋಣೆಯಲ್ಲಿ ಇದ್ದದ್ದು ಟ್ರೋಖರ್ ಮಾತ್ರ.

ಆದರೂ ಗೆರ್‌ಮರ್‌ಗೆ ತನಗಾದ ನಿರಾಶೆಯ ಅರಿವಾಗಲೇ ಇಲ್ಲ. ಅವನ ಅಂತರಂಗದಲ್ಲಿ ಬೆಳೆದು ಬಂದಿದ್ದ ಒತ್ತಡ, ಉದ್ವೇಗಗಳು ಸಡಿಲವಾದವು; ಕರಗಿದವು. ಅವನ ಹೃದಯ ಶೀತಲವಾಯಿತು.

ಅವನು ಒಂದೇ ನೋಟದಲ್ಲಿ, ಕೊಠಡಿಯೊಳಗಿನ ಸನ್ನಿವೇಶವನ್ನು ಗ್ರಹಿಸಿದ.

ಮೇಜಿನ ಮೇಲೆ ಒಂದು ಪುಟ್ಟ ಉಡುಗೊರೆಯ ಪ್ಯಾಕೆಟ್ ಇತ್ತು. ಬಿಳಿಯ ಕಾಗದದಲ್ಲಿ ಸುತ್ತಿದ್ದು. ಅದರ ಸುತ್ತ ಎಚ್ಚರಿಕೆಯಿಂದ ಕಟ್ಟಿದ ಹಸಿರು ಬಣ್ಣದ ಟೇಪ್, ಟ್ರೋಖರ್ ಕೋಟು, ಅವನು ಕುಳಿತ ಕುರ್ಚಿಯ [illegible]ಗದಲ್ಲಿ ನೇತಾಡುತ್ತಿತ್ತು. ಅದನ್ನು ಆಗತಾನೇ ಅಲ್ಲಿ ಎಸೆದಿದ್ದ. ಸ್ವತಃ ಟ್ರೋಖರ್ ಕಡುನೀಲಿ ಬಣ್ಣದ ಹೊಚ್ಚ ಹೊಸ ಸೂಟ್ ಹಾಕಿಕೊಂಡು ಕೂತಿದ್ದ. ಅವನ ಬಿಳಿಯ ಅಂಗಿಯ ತೋಳುಗಳು ಫಳಫಳ ಹೊಳೆಯುತ್ತಿದ್ದವು. ಅವನು ಇಲ್ಲಿನ ಕೆಲಸ ಮುಗಿದ ಬಳಿಕ ಯಾವುದೋ ಕ್ರಿಸ್‌ಮಸ್ ಸಂತೋಷಕೂಟಕ್ಕೆ ಹೋಗಲಿರುವನೆಂಬ ಸಂಗತಿ ಸ್ಪಷ್ಟವಾಗಿಯೇ ಇತ್ತು.

"ಕುಳಿತುಕೊಳ್ಳಿ, ಶ್ರೀಯುತ ಗೆರ್‌ಮರ್ ಅವರೇ."

ಟ್ರೋಖರ್ ತನ್ನ ಮೇಜಿನ ಮುಂದಿದ್ದ ಕುರ್ಚಿಯ ಕಡೆ ಕೈಮಾಡಿ ತೋರಿಸಿದ. ಬಾಗಿಲ ಹತ್ತಿರ ನಿಂತಿದ್ದ ಕಾವಲುಗಾರನಿಗೆ ತಮ್ಮಿಬ್ಬರನ್ನು ತಮ್ಮ ಪಾಡಿಗೆ ಬಿಟ್ಟು ದೂರ ಹೋಗುವಂತೆ ಸನ್ನೆ ಮಾಡಿದ. ತಾನು ಒಂದು ಸಿಗರೇಟನ್ನು ಹಚ್ಚಿಕೊಂಡು ಪ್ಯಾಕೆಟ್ ಅನ್ನು ಗೆರ್‌ಮರ್ ಕಡೆ ಚಾಚಿದ.

"ಸಿಗರೇಟ್?"

ಗೆರ್‌ಮರ್ ಬೇಡವೆಂದು ತಲೆ ಅಲ್ಲಾಡಿಸಿದ.

ಟ್ರೋಖರ್ ಈ ನಿರಾಕರಣೆಯನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಪ್ಯಾಕನ್ನು ಪಕ್ಕಕ್ಕೆ ತಳ್ಳಿದ.

"ನಾನು ಇಷ್ಟು ಹೊತ್ನಲ್ಲಿ ನಿನ್ನ ಯಾಕೆ ಕರೆದೇ ಅಂತ ನಿನಗೆ ಆಶ್ಚರ್ಯ ಆಗ್ತಾ ಇದೆಯಾ?" ಅವನು ಮೇಜಿನ ತುದಿಯಲ್ಲಿ ಕುಳಿತ.

(ಮುಂದುವರಿಯುವುದು)

ಹಸಿದ ಕಣ್ಣುಗಳಿಂದ

ಬೀದಿಗೆ ಬಿದ್ದವರು

ವ್ಯವಸ್ಥೆಯೊಂದಿಗೆ ಹೋರಾಡುತ್ತ ಬದುಕು ಸುಟ್ಟುಕೊಳ್ಳುವ ಭಾರತದ ಕಾರ್ಮಿಕರ ಕಥೆ ವಿಶ್ವದಲ್ಲೇ ವಿಚಿತ್ರವಾದದ್ದು. ದುಡಿದು ಭಾರತವನ್ನು ಬದುಕಿಸುವ ಈ ಶ್ರಮಜೀವಿಗಳ ಬದುಕಿಗೆ ಅನ್ನ ಕೊಡುವವರಾರೂ ಇಲ್ಲ. ಅವರ ನೊ.ವು ಶೋಷಣೆ ಕೇಳುವವರಾರೂ ಇಲ್ಲ. ನಿತ್ಯ ಬಂಡವಾಳಶಾಹಿಗಳ ಕಪಿಮುಷ್ಟಿಯಲ್ಲಿ ಜೀವ ಹಿಡಿದುಕೊಂಡು ತುತ್ತು ಅನ್ನಕ್ಕಾಗಿ ಪರದಾಡುತ್ತಾರೆ. ಈ ನೊಂದ ಜನರ ನೋವಿನ ಕೂಗು ವಿಧಾನ ಸೌಧ, ಪಾರ್ಲಿಮೆಂಟುಗಳಲ್ಲಿ ದರ್ಬಾರು ಮಾಡುವ ಮೂರ್ಖ ಸರ್ಕಾರಕ್ಕೆ ಕೇಳುವದಿಲ್ಲ. ಕತ್ತಿ, ಬಂದೂಕು, ಚಾಕುಗಳಿಂದ ಬಡ ಕಾರ್ಮಿಕರನ್ನು ಸುಲಿಯುತ್ತ ಬಂದ ಬಂಡವಾಳಶಾಹಿಗಳ ಬೇಟೆ ಈ ದರಿದ್ರ ಭಾರತದ ಕರಿ ನೆಲದಲ್ಲಿ ನಿತ್ಯ ನಡೆಯುತ್ತಿದೆ.

ಇದಕ್ಕೆ ಉದಾಹರಣೆಗಳ ಲೆಕ್ಕವಿಲ್ಲ, ತುಳಿಸಿಕೊಂಡವರ ನೋವಿನ ವೇದನೆಗೆ ಕೊನೆಯಿಲ್ಲ. ಇದಕ್ಕೆ ಇತ್ತೀಚಿನ ಒಂದು ಹೃದಯವಿದ್ರಾವಕ ಘಟನೆ ಮತ್ತೊಂದು ಉದಾಹರಣೆಯಾಗಿ ಸೇರಿಕೊಳುತ್ತಿದೆ. ಸ್ವತಂತ್ರ ಭಾರತದ ಕಪ್ಪು ಇತಿಹಾಸದಲ್ಲಿ ಕರಗಿ ಹೋಗುತ್ತಿದೆ.

ಈಗ್ಗೆ ಕೆಲವು ದಿನಗಳ ಹಿಂದೆ ಉತ್ತರ ಪ್ರದೇಶದ ರ್‍ಯಾಲಿ ರಸಗೊಬ್ಬರ ಕಾರ್ಖಾನೆ ನೌಕರರು ತಮ್ಮ ನ್ಯಾಯದ ಬೇಡಿಕೆಗಾಗಿ ಹೋರಾಟ ಹೂಡಿದರು. ಆದರೆ ಆ ಕಾರಖಾನೆಯ ಮಾಲೀಕರ ಗೂಂಡಾಗಳು, ಪೋಲೀಸ್ ನಾಯಿಗಳು ಈ ಬಡ ಕಾರ್ಮಿಕರ ಎದೆಗೆ ಬಂದೂಕಿನ ಗುರಿ ಹಿಡಿದರು. ಪ್ರಾಣಿಗಳಂತೆ ಕೊಂದರು. ರಕ್ತಪಾತ ಮಾಡಿದರು. ಸತ್ತವರ ಲೆಕ್ಕವಿಲ್ಲ. ಆದರೆ ಕಾಂಗ್ರೆ ದೊರೆಗಳು ಕಾರಖಾನೆ ಮಾಲೀಕರ ಕಾಲು ನೆಕ್ಕಿ ಸತ್ತವರ ಸಂಖ್ಯೆ ಬರೀ ಒಂಭತ್ತೇ ಎಂದು ಸಾರಿದರು. ಹಾಡು ಹಗಲೇ ಜಾಲಿಯನ್‌ವಾಲಾ ಭಾಗ್ ಘಟನೆಯಂತೆ ನೂರಾರು ಕಾರ್ಮಿಕರ ಜೀವಹಾನಿಯಾಯಿತು. ಆದರೂ ಈ ನೀತಿಗೆಟ್ಟ ಸರ್ಕಾರಕ್ಕೆ ಒಂದಿಷ್ಟು ಕನಿಕರವಿಲ್ಲ. ಸತ್ತ ಕಾರ್ಮಿಕರ ಹೆಂಡಿರು-ಮಕ್ಕಳು ಬೀದಿಗೆ ಬಿದ್ದರೂ ಕೇಳುವರು ಯಾರೂ ಇಲ್ಲ. ಕಣ್ಣೆದುರೇ ಕಾರ್ಮಿಕರ ರಕ್ತ ಹರಿದರೂ ಆ ರಕ್ತದಲ್ಲಿ ಸ್ನಾನ ಮಾಡಿ, ಗಂಗೆಯಲ್ಲಿ ಮುಳುಗಿ ಕಲ್ಲು ದೇವರಿಗೆ ಕೈ ಮುಗಿವ ಮಹಾತ್ಮರಿಗೆ ನಾವು ಏನೆಂದು ಕರೆಯಬೇಕು ?

ಹಾದರ ಮಾಡುವ ದೇವರುಗಳು

ಹಾದರ ಮಾಡುವ ಜನವೆಲ್ಲ ದೇವರ ಹೆಸರಲ್ಲಿ ಹಾದರತನ ಮಾಡುತ್ತ ಮಹಾಭಾರತದ ಕೃಷ್ಣನನ್ನು ತಮ್ಮ ನಾಯಕನಾಗಿ ಮಾಡಿಕೊಂಡರು. ಹಾದರದಿಂದಲೇ ಹೆಸರು ಮಾಡಿ ಶ್ರೀ ಕೃಷ್ಣನು ದೇವರೆನಿಸಿಕೊಂಡನು.

ಆದರೆ ಈಗ ಕನ್ನಡದ ಜನಪದ ಕವಿ ಚಂದ್ರಶೇಖರ ಕಂಬಾರರಿಗೆ ಈ ಮಹಾಭಾರತದ ಶ್ರೀ ಕೃಷ್ಣ ತುಂಬಾ ಸಮಸ್ಯೆ ತರುತ್ತಿದ್ದಾನೆ. ಕೆಲವು ದಿನಗಳ ಹಿಂದೆ ಕಂಬಾರರು ವಿಜಾಪೂರದ 'ಕುರುಕ್ಷೇತ್ರ' ಪತ್ರಿಕೆಯಲ್ಲಿ ಈ ಕೃಷ್ಣನ ಹಾದರತನ ಬಯಲುಮಾಡಿ ಹಾದರ ಮಾಡುವ ಕೃಷ್ಣನನ್ನು ಬಯ್ದರು. ಆದರೆ ಈಗ ಕೃಷ್ಣನಿರಲಿ; ಈ ಕೃಷ್ಣವಂಶದ ಎ. ಪಿ. ಕುಲಕರ್ಣಿ ಎಂಬವರಿಗೆ ಅವಮಾನವಾದಂತಾಗಿದೆ. ಹಾಗಾಗಿ ಎ. ಪಿ. ಕುಲಕರ್ಣಿಯವರು ಕಂಬಾರರನ್ನು ಕೋರ್ಟಿಗೆಳೆದು "ನೀವು ಹಿಂದೂ ಧರ್ಮಕ್ಕೆ ಅವಮಾನ ಮಾಡಿದ್ದಿರಿ." ಎಂದು ಯುದ್ಧಕ್ಕೆ ಇಳಿದಿದ್ದಾರೆ. ಆದರೆ ಇವರಿಬ್ಬರ ಜಗಳ ಕೇಳದ ಕೃಷ್ಣ ಗುಡಿಗಳಲ್ಲಿ ಪೂಜಿಸಿಕೊಳ್ಳುತ್ತಿದ್ದಾನೆ !

ಅಖಿಲ ಭಾರತ ವೀರರ ಕರೆ

ಅಖಿಲ ಭಾರತ ವೀರಶೈವ ಯುವಕರು ತಮ್ಮ ಗುರು ಮಲ್ಲಾರಾಧ್ಯರ ಮೇಲೆ ತಿರುಮಂತ್ರ ಹೂಡುತ್ತಿದ್ದಾರೆ. ಮಲ್ಲಾರಾಧ್ಯ ಮತ್ತು ವೀರಶೈವ ಜಗದ್ಗುರುಗಳು ಹಾವನೂರ ವರದಿ ನೆಪಮಾಡಿಕೊಂಡು ಸಮಾಜದಿಂದ ಮತ್ತು ಮಠಗಳಿಂದ ಸಾವಿರಾರು ರೂಪಾಯಿಯ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಅಖಿಲ ಕರ್ನಾಟಕ ವೀರಶೈವ ಲಿಂಗಾಯಿತ ಸಮ್ಮೇಳನದ ಕಾರ್ಯದರ್ಶಿ ವಿ. ಕೊ. ಜವಳಿ ಕಳೆದ ವಾರ ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಜಾತ್ಯಾತೀತ ನಾಡಿನಲ್ಲಿ ಜಾತಿಯ ಹೆಸರಿನ ಮೇಲೆ ಮುಂದೆ ಬರುವ ಧಾರ್ಮಿಕ ಮುಖಂಡರು ಇನ್ನು ಮುಂದಾದರೂ ತಮ್ಮ ಮತೀಯ ಭಾವನೆಗಳಿಂದ ದೂರ ಉಳಿದರೆ ಒಳಿತು. ಇಲ್ಲವಾದರೆ ಅಖಿಲ ಭಾರತ ವೀರಶೈವ ಯುವಕರೇ ವೀರರಾಗಿ ಬಾಲ ಕತ್ತರಿಸುವ ದಿನಗಳು ದೂರವಿಲ್ಲ ಎಂಬುದನ್ನು ಮಲ್ಲಾರಾಧ್ಯ ಜಗದ್ಗುರುಗಳು ಅರಿತುಕೊಳ್ಳಬೇಕು.

ಅದಮ್ಯ ಚೇತನಕ್ಕೊಂದು ಉದಾಹರಣೆ

ಕಾಂ॥ ಸಾಧನ್ ಗುಪ್ತ

ವಿಜಯವಾಡಾದಲ್ಲಿ ನಡೆದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ 11ನೇ ಅಖಿಲ ಭಾರತ ಸಮ್ಮೇಳನದಲ್ಲಿ ಒಬ್ಬ ಅಂಥ ಪ್ರತಿನಿಧಿ ಆಗಮಿಸಿದ್ದರು. ಅವರೇ ಕಾಂ। ಸಾಧನ ಗುಪ್ತ. ಕಾಂ। ಸಾಧನ ಗುಪ್ತ ಖ್ಯಾತ ನ್ಯಾಯವಾದಿಗಳೂ, ಪ. ಬಂಗಾಲ ಸರಕಾರದ ಅಡಿಷನಲ್ ಅಡ್ವೋಕೇಟ್ ಜನರಲ್‌ರೂ ಆಗಿದ್ದಾರೆ. ನ್ಯಾಯಾಧೀಶರ ಗಮನ ಸೆಳೆದರು. ಇವರೇ ಕಾಂ। ಸಾಧನಗುಪ್ತ.

ಕಾಂ। ಸಾಧನ ಗುಪ್ತ 1917ರಲ್ಲಿ ಡಾಕಾ (ಈಗ ಬಾಂಗ್ಲಾದ ರಾಜಧಾನಿ) ದಲ್ಲಿ ಜನಿಸಿದರು. ಕೇವಲ 16 ತಿಂಗಳು ಮಗುವಾಗಿದ್ದಾಗ ಸಿಡುಬು ರೋಗ ಬಂದು ಕಣ್ಣಿನ ದೃಷ್ಟಿ ಹೊರಟು ಹೋಯಿತು. ಕಾಂ। ಸಾಧನ ಗುಪ್ತರ ತಂದೆ ಜೆ. ಸಿ. ಗುಪ್ತರೂ ಪ್ರಸಿದ್ಧ



ಪತ್ನಿ ಕಾಂ। ಮಂಜರಿಯೊಂದಿಗೆ ಸಾಧನ್ ಗುಪ್ತ

ಭಾರತದ ನ್ಯಾಯಾಂಗದ ಇತಿಹಾಸದಲ್ಲಿ ಷಾಬ್‌ನಾಥ ಬ್ಯಾನರ್ಜಿ ಕೇಸ್ ತುಂಬ ಪ್ರಸಿದ್ಧವಾದುದು. ಇದು ಬ್ರಿಟಿಷ್ ಸರಕಾರ ಡಿ.ಐ.ಆರ್. ಪ್ರಕಾರ ಬಂಧಿಸಿದಕ್ಕೆ ವಿರುದ್ಧವಾಗಿ ಕಲ್ಕತ್ತಾ ಹೈಕೋರ್ಟಿನಲ್ಲಿ ಬಂದ ಹೇಬಿಯಸ್ ಕಾರ್ಪಸ್ ಕೇಸ್. ಈ ಕೇಸ್‌ನಲ್ಲಿ ಷಾಬ್‌ನಾಥ ಬ್ಯಾನರ್ಜಿ ಪರವಾಗಿ ಖ್ಯಾತ ನ್ಯಾಯವಾದಿಗಳಾಗಿದ್ದ ಎಸ್. ಸಿ. ಚಟರ್ಜಿ, ಎ. ಫಸಲುಲ್ ಹಕ್ ಮುಂತಾದ ಪ್ರಮುಖರು ಹಾಜರಾಗಿದ್ದರು. ಅವರಲ್ಲಿ ಒಬ್ಬ ಕುರುಡ ಯುವಕ ನ್ಯಾಯವಾದಿಯೂ ಇದ್ದರು. ಕೊನೆಗೆ ಹೈಕೋರ್ಟಿನಲ್ಲಿ ಈ ಕೇಸ್ ಗೆದ್ದಿತು. ಅಂಥ ಯುವಕ ನ್ಯಾಯವಾದಿ. ಕಾಂ। ಸಾಧನ್ ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜ್‌ನಲ್ಲಿ ಅಧ್ಯಯನ ಮಾಡಿದರು. ಇಂದು ಕುರುಡರಿಗೆ ಅಧ್ಯಯನ ಮಾಡುವದು ಅಷ್ಟೇನೂ ಕಷ್ಟವಲ್ಲವೆಂದು ಸಾಧನ್ ಹೇಳುತ್ತಾರೆ. ಮಾತನಾಡುವ ಪುಸ್ತಕಗಳೆಂದು ಹೇಸರಾದ ಟೇಪ್ ರಿಕಾರ್ಡರುಗಳು ಸಹಾಯಕ್ಕಿವೆ. ಹಿಂದೆ ಈ ಸೌಲಭ್ಯವಿರಲಿಲ್ಲ. ಕಾಂ। ಸಾಧನ್ ತುಂಬ ಕಷ್ಟದಿಂದ ಅಧ್ಯಯನ ಮುಂದುವರೆಸಿದರು. ಎಲ್ಲಾ ಪರೀಕ್ಷೆಗಳನ್ನು ಪ್ರಥಮ ದರ್ಜೆಯಲ್ಲೇ ತೇರ್ಗಡೆ ಮಾಡಿದರು. ಇಂಗ್ಲೆಂಡ್‌ಗೆ ಹೋಗಿ ಬ್ಯಾರಿಸ್ಟರ್ ಪದವಿ ಪಡೆಯಲು ಯತ್ನಿಸಿದಾಗ ಎರಡನೇ ಜಾಗತಿಕ ಯುದ್ಧ ಪ್ರಾರಂಭವಾಯಿತು. ಆದುದರಿಂದ ಕಲ್ಕತ್ತಾದಲ್ಲೇ ಪರೀಕ್ಷೆಗೆ ಬರೆಯಲು ಅನುಮತಿ ದೊರೆಯಿತು. ನಂತರ ಇಂಗ್ಲೆಂಡ್‌ಗೆ ಹೋಗಿ ಅಧ್ಯಯನ ಪೂರ್ತಿಗೊಳಿಸಿದರು.

1939 ರಿಂದಲೇ ಕಾಂ। ಸಾಧನ್ ಕ್ರಾಂತಿಕಾರೀ–ಪುರೋಗಾಮಿ ಚಟುವಟಿಕೆಗಳಲ್ಲಿ ಭಾಗವಹಿಸಲಾರಂಭಿಸಿದರು. 1941 ರಿಂದ ಮೂರು ವರ್ಷ ಬಂಗಾಲ ವಿದ್ಯಾರ್ಥಿ ಫೆಡರೇಷನ್‌ನ ಅಧ್ಯಕ್ಷರಾಗಿದ್ದರು. 1944ರಲ್ಲಿ ಕಮ್ಯುನಿಸ್ಟ್ ಪಾರ್ಟಿ ಸದಸ್ಯರಾದರು. ನಂತರ ಕಾರ್ಮಿಕ ಸಂಘಟನೆಗಳಲ್ಲಿ ಕೆಲಸ ಮಾಡಿದರು. ಇಂದೂ ಅವರು ಇಂಡಿಯಾ ಟೊಬೇಕೋ ಎಂಪ್ಲಾಯೀಸ್ ಯೂನಿಯನ್ ಮುಂತಾದ ಹಲವಾರು ಕಾರ್ಮಿಕ ಸಂಘಗಳ ಪದಾಧಿಕಾರಿಯಾಗಿದ್ದಾರೆ.

1953ರಲ್ಲಿ ಕಲ್ಕತ್ತಾ ದಕ್ಷಿಣ-ಪೂರ್ವ ಕ್ಷೇತ್ರದಿಂದ ವಿಧಾನ ಸಭೆಗೆ ಚುನಾಯಿತರಾದರು. 1962ರಲ್ಲಿ ಲೋಕ ಸಭಾ ಚುನಾವಣೆಯಲ್ಲಿ ವಿಜೇತರಾದರು. ಲೋಕಸಭೆಯ ಪ್ರಥಮ ಕುರುಡ ಸದಸ್ಯ ಕಾಂ। ಸಾಧನ್.

ಪ. ಬಂಗಾಲದಲ್ಲಿ ಎಡರಂಗ ಸರಕಾರ ಅಧಿಕಾರಕ್ಕೆ ಬಂದಾಗ ಭೂಸುಧಾರಣೆ ಮಸೂದೆಯ ಬಗ್ಗೆ ವಿಶೇಷ ಕಾನೂನಿನ ಸಲಹೆಬೇಕಾಗಿ ಬಂದಿತು. ಗೇಣಿದಾರರ ಸಮಸ್ಯೆಯ ಕುರಿತು ಹೈಕೋರ್ಟ್‌ನಲ್ಲಿ ಸರಕಾರದ ಪರವಾಗಿ ವಾದಿಸಲು ಕಾಂ। ಸಾಧನ್ ಮುಂದೆ ಬಂದರು. ಪ. ಬಂಗಾಲದ ಎಡಂಗ ಸರಕಾರ ಕಾಂ। ಸಾಧನ್ ಗುಪ್ತರನ್ನು ಅಡಿಷನಲ್ ಅಡ್ವೋಕೇಟ್ ಜನರಲ್ ಆಗಿ ನಿಯಮಿಸಿತು.

ಲಕ್ಷಗಟ್ಟಲೆ ಗೇಣಿದಾರರನ್ನು ದಾಖಲೆ ಮಾಡುವ ಬಹುದೊಡ್ಡದಾದ ಜವಾಬ್ದಾರಿಯನ್ನು ಎಡರಂಗ ಸರಕಾರ ಯಶಸ್ವೀಯಾಗಿ ಪೂರೈಸಿತು. ಕಾನೂನಿನ ದೃಷ್ಟಿಯಲ್ಲಿ ನಿಜವಾದ ರೈತರಿಗೆ ಪಟ್ಟಾ ಪಡೆಯಲು ಹಾಗೂ ಆರ್ಥಿಕ ಸಹಾಯ ಪಡೆಯಲು ಈ ದಾಖಲೆ ಸಹಾಯಕವಾಗುತ್ತದೆ.

ಕಾಂ। ಸಾಧನ್ ಗುಪ್ತರ ಪತ್ನಿ ಕಾಂ। ಮಂಜುರಿ ಗುಪ್ತ ಮಹಿಳಾ ಸಂಘಟನೆಯ ಅಖಿಲ ಭಾರತ ನಾಯಕಿ. ವೃತ್ತಿಯಲ್ಲಿ ವಕೀಲರು. ಜೀವನದಲ್ಲಿ, ಕೋರ್ಟು ಕಚೇರಿಗಳಲ್ಲಿ, ಹೋರಾಟ ರಂಗದಲ್ಲಿ ಈ ಅಪರೂಪದ ದಂಪತಿಗಳು ಜೋಡಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ದೃಷ್ಟಿಕಳೆದುಕೊಂಡೂ ಪ್ರವಾಹದ ವಿರುದ್ಧ ಈಸಿ ಗಮನಾರ್ಹ ಸಾಧನೆ ಮಾಡಿರುವ ಕಾಂ। ಸಾಧನ್ ಗುಪ್ತ ಅದಮ್ಯ ಚೇತನಕ್ಕೊಂದುಉದಾಹರಣೆ.

'ಜೈಲ್ ಭರೋ' ರೈತರು

ಮಲೆನಾಡಿನಲ್ಲಿ ಈಗ ಕಾಂಗ್ರೆ ಪೋಲಿ–ಸರಿಗೆ ವಿಪರೀತ ಕೆಲಸ. ಮಾತು-ಮಾತಿಗೆ ಜೇಲ್ ಭರೋ ಎನ್ನುತ್ತ ಮಲೆನಾಡಿನ ರೈತರೆಲ್ಲ ಜೈಲು ತುಂಬುತ್ತಿದ್ದಾರೆ. ದಂಗೆ ಎದ್ದ ಈ ರೈತರಿಗೆ ಸಮಾಧಾನ ಮಾಡಲು ಕಾಂಗ್ರೆ ರಾಜಕಾರಣಿಗಳು ಕೈಯ್ಯಲ್ಲಿ ಪಂಚೆ ಹಿಡಿದುಕೊಂಡು ಓಡಾಡುತ್ತಿದ್ದಾರೆ. ಮುಖ್ಯಮಂತ್ರಿ ಗಾಬರಿಯಾಗಿದ್ದಾರೆ. ಕಾಗೋಡು ತಿಮ್ಮಪ್ಪನವರಿಗೆ ತಿರುಪತಿ ತಿಮ್ಮಪ್ಪ ನೆನಪು ಬರುತ್ತಿದ್ದಾನೆ.

ಇದು ಸಹಜ. ದುಡಿಯುವ ರೈತರ ಬಾಯಿಗೆ ಮಣ್ಣು ಹಾಕುವ ಕಂದಾಯ ಇಲಾಖೆಯ ಅಧಿಕಾರಿಗಳ ಕಿರುಕುಳ ಎಷ್ಟೆಂದು ಸಹಿಸುವದು ? ಸಹನೆ ಮೀರಿದಾಗ ಬಂಡೇಳುವದು ಸಾಮಾನ್ಯ. ಹಾಗಾಗಿ ಇಂದು ಮಲೆನಾಡಿನ ರೈತರ ಕಣ್ಣು ಕೆಂಪಾಗುತ್ತಿದೆ. ಈಗಲಾದರೂ ಸರಕಾರ ದುಡಿಯುವ ರೈತರ ಕಷ್ಟ ಅರಿತಿರೆ ಮೇಲು. ಇಲ್ಲದಿದ್ದರೆ ಮಲೆನಾಡಿನ ಹಚ್ಚ ಹಸಿರು ಕೆಂಪಾದೀತು.

—ನಾಗ್ ಕಲಾಲ್

ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆ

(ಹಿಂದಿನ ಪುಟದಿಂದ)

ಸಂಯುಕ್ತ ಹೋರಾಟ ನಡೆಸಲು ಅನುವಾಗುವಂತೆ 1981 ಜೂನ್ 4 ರಂದು ಎನ್.ಸಿ.ಸಿ. ಜನ್ಮ ತಾಳಿತು. ಎನ್. ಸಿ.ಸಿ. ನೇತೃತ್ವದಲ್ಲಿ, ನವೆಂಬರ 23 ರಂದು ದೆಹಲಿಗೆ ಐತಿಹಾಸಿಕ 'ಪಾರ್ಲಿಮೆಂಟ್ ಚಲೋ' ಕಾರ್ಯಕ್ರಮ ನಡೆಯಿತು. ಜನವರಿ 19, 1982 ರಂದು ನಡೆದ ಸಾರ್ವತ್ರಿಕ ಮುಷ್ಕರ ದೇಶದ ಕಾರ್ಮಿಕ ವರ್ಗದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನೇ ತೆರೆಯಿತು.

ನಮ್ಮ ರಾಜ್ಯದಲ್ಲಿ ಗುಂಡೂರಾವ್ ಸರ್ಕಾರ ಪೋಲಿಸ್ ರಾಜ್ಯವನ್ನು ನಡೆಸುತ್ತಿದೆ. ನಿರುದ್ಯೋಗ ಸಮಸ್ಯೆ, ಬೆಲೆ ಏರಿಕೆ, ಬಡತನ ಇವು ಒಂದು ಕಡೆ ದಿನನಿತ್ಯದ ಸಮಸ್ಯೆಗಳಾದರೆ, ಮತ್ತೊಂದು ಕಡೆ ಪ್ರಜಾಸತ್ತಾತ್ಮಕ ಮತ್ತು ನಾಗರೀಕ ಹಕ್ಕುಗಳನ್ನು ನಿರ್ನಾಮಗೊಳಿಸಲಾಗುತ್ತಿದೆ. ಸರ್ಕಾರವು ಈ ವೇಳೆಗಾಗಲೇ ಎಲ್ಲರಿಗೂ ವಿದ್ಯೆ ಕಲಿಯುವ ಅವಕಾಶವನ್ನು ಕಲ್ಪಿಸಿಕೊಟ್ಟು, ಕನ್ನಡವನ್ನು ಎಲ್ಲಾ ಹಂತಗಳಲ್ಲೂ ಆಡಳಿತ ಭಾಷೆಯನ್ನಾಗಿ ಮಾಡಬೇಕಿತ್ತು. ಆದರೆ ಹಾಗೆ ಮಾಡಿಲ್ಲ. ಈ ಸಂದರ್ಭದಲ್ಲಿ ನಾವು ಕರ್ನಾಟಕದಲ್ಲಿ ವಾಸಿಸುವ ಎಲ್ಲಾ ಕನ್ನಡೇತರರಿಗೆ ಕನ್ನಡವನ್ನು ಕಲಿಯುವಂತೆ ಮನವಿ ಮಾಡಿಕೊಳ್ಳುತ್ತೇವೆ. ವಿಭಿನ್ನ ಪ್ರಕಾರಿ ಮತ್ತು ಸಮಯಸಾಧಕ ಗುಂಪುಗಳು ಭಾಷೆಯ ಹೆಸರಿನಲ್ಲಿ ಜನತೆಯ ಒಗ್ಗಟ್ಟನ್ನು ಮುರಿಯುತ್ತಿರುವುದರ ಕುರಿತು ಕಾರ್ಮಿಕ ವರ್ಗ ಗಂಭೀರವಾಗಿ ಯೋಚಿಸಬೇಕಾಗಿದೆ. ಕನ್ನಡಿಗರು ಇತರ ಭಾಷಾ ಭಾಂಧವರೊಡನೆ ಸೌಹಾರ್ಧತೆಯಿಂದ ಜೀವಿಸಬೇಕೆಂದು ಕಳಕಳಿಯಿಂದ ನಾವು ಮನವಿ ಮಾಡಿಕೊಳ್ಳುತ್ತೇವೆ.

ಕಾರ್ಮಿಕವರ್ಗ ಮತ್ತಿತರ ಪ್ರಜಾಪ್ರಭುತ್ವ ಶಕ್ತಿಗಳು ಮಾತ್ರ ಈಗಿರುವ ಅವ್ಯವಸ್ಥೆಯನ್ನು ಕೊನೆಗಾಣಿಸಲು ಸಾಧ್ಯ. ಶೋಷಣಾರಹಿತ ಸಮಾಜ ನಿರ್ಮಾಣದತ್ತ ನಡೆಯುವ ಹೋರಾಟದ ಗೆಲುವಿಗೆ ಕಾರ್ಮಿಕ ವರ್ಗದೊಟ್ಟಿಗೆ ರೈತರು, ಕೂಲಿಕಾರರು, ವಿದ್ಯಾರ್ಥಿಗಳು ಯುವಜನರು, ಮಹಿಳೆಯರು, ಬುದ್ಧಿಜೀವಿಗಳು ಮತ್ತು ಎಲ್ಲಾ ರೀತಿಯ ಶ್ರಮಜೀವಿಗಳನ್ನು ಒಂದುಗೂಡಿಸಿಕೊಳ್ಳಬೇಕಾಗಿದೆ.

ಅಂತರರಾಷ್ಟ್ರೀಯ ಕಾರ್ಮಿಕ ಸೌಹಾರ್ಧತಾ ದಿನಾಚರಣೆಯ ದಿನವಾದ ಈ ಮೇ ದಿನದಂದು ಶಾಂತಿ, ಪ್ರಗತಿ ಮತ್ತು ಸಮಾಜವಾದಕ್ಕಾಗಿ ಹೋರಾಡೋಣ ಎಂದು ನಾವೆಲ್ಲ ಪಣತೊಡೋಣ.

ಎಸ್.ಎಫ್.ಐ. ನಿಲುವು

ಮಾತೃಭಾಷೆಗೆ ಪ್ರಥಮ ಭಾಷೆಯ ಸ್ಥಾನವನ್ನು ಮುಂದುವರಿಸಿ ಕನ್ನಡ ಭಾಷೆಯನ್ನು ಕಡ್ಡಾಯ ಕಲಿಕೆಯ ವಿಷಯವನ್ನಾಗಿ ಮಾಡುವ ಕರ್ನಾಟಕ ರಾಜ್ಯ ಸರ್ಕಾರದ ನಿರ್ಧಾರವನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್.ಐ.) ರಾಜ್ಯ ಸಮಿತಿಯು ಸ್ವಾಗತಿಸಿದೆ.

ಅಲ್ಪಸಂಖ್ಯಾತರ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಯ ದೃಷ್ಟಿಯಿಂದ ಕನ್ನಡವನ್ನು ಪ್ರಥಮ ಭಾಷೆಯನ್ನಾಗಿಯೇ ಕಡ್ಡಾಯಗೊಳಿಸಬೇಕೆಂಬ ಬೇಡಿಕೆ ಸರಿಯಲ್ಲ. ಇದಕ್ಕಿಂತ ಮುಖ್ಯವಾಗಿ ಆಡಳಿತ ಮತ್ತು ಶಿಕ್ಷಣರಂಗದಿಂದ ಇಂಗ್ಲೀಷ್ ಭಾಷೆಯನ್ನು ತೊಲಗಿಸಿದರೆ ಮಾತ್ರ ಕನ್ನಡದ ಏಳಿಗೆ ಸಾಧ್ಯ. ಆದ್ದರಿಂದ ಎಲ್ಲ ಹಂತಗಳಲ್ಲೂ ಕನ್ನಡವನ್ನು ಆಡಳಿತ ಭಾಷೆಯಾಗಿ ಮತ್ತು ಶಿಕ್ಷಣ ಮಾಧ್ಯಮವಾಗಿ ಜಾರಿಗೊಳಿಸಲು ತಕ್ಷಣ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಎಸ್. ಎಫ್. ಐ. ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತದೆ. ಈ ಗುರಿಸಾಧನೆಯ ಹೋರಾಟಕ್ಕೆ ಎಸ್. ಎಫ್. ಐ. ತನ್ನ ಸಂಪೂರ್ಣ ಬೆಂಬಲ ಘೋಷಿಸುತ್ತದೆ ಎಂದು ಎಸ್. ಎಫ್. ಐ. ನ ಪ್ರಧಾನ ಕಾರ್ಯದರ್ಶಿ ಕಾ|| ಎಸ್. ಆರ್. ಆರಾಧ್ಯ ತಿಳಿಸಿದ್ದಾರೆ.

ಬಜಾಲ್ ಪಕಲಡ್ಕದಲ್ಲಿ

ಬಹಿರಂಗ ಸಭೆ

ಏಪ್ರಿಲ್ 24 ಮತ್ತು 25 ರಂದು ಬಂಟ್ವಾಳದಲ್ಲಿ ನಡೆದ ರಾಜ್ಯ ಬೀಡಿ ಕಾರ್ಮಿಕರ ಸಮ್ಮೇಳನದ ಪೂರ್ವಭಾವಿಯಾಗಿ ಬಜಾಲ್ ಪಕಲಡ್ಕದಲ್ಲಿ ಪ್ರಜಾರ ಸಭೆ ನಡೆಯಿತು. ಬಹಿರಂಗಸಭೆಯ ಅಧ್ಯಕ್ಷತೆಯನ್ನು ಕೆ. ಪೂವಪ್ಪ ಸಾಲಿಯಾನ್ ವಹಿಸಿದ್ದರು.

ಸಭೆಯ ಆರಂಭಕ್ಕೆ ಮುನ್ನ ಜಲ್ಲಿಗುಡ್ಡೆಯಿಂದ ಬೀಡಿ ಕಾರ್ಮಿಕರು ಮೆರವಣಿಗೆಯಲ್ಲಿ ಆಗಮಿಸಿದ್ದರು. ಪಕ್ಕಿನ ಮೊಗರು, ಕರ್ಮಾರು, ಬಜಾಲ್ ಪಡ್ಪು ಲಡ್ಕ ಪ್ರದೇಶ ಬೀಡಿ ಕಾರ್ಮಿಕರು ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು.

ಸಭೆಯನ್ನುದ್ದೇಶಿಸಿ ಮಂಜೇಶ್ವರ ಪಂಚಾಯತ್ ಅಧ್ಯಕ್ಷರಾದ ಕಾ|| ಬಿ. ಎಂ. ರಾಮಯ್ಯಶೆಟ್ಟಿ, ಕಾ|| ಲೋಕಯ್ಯ ಅವರುಗಳು ಮಾತನಾಡಿದರು. ಆರಂಭದಲ್ಲಿ ಕಾ|| ಜೆ. ಬಾಲಕೃಷ್ಣ ಶೆಟ್ಟಿ ಸಭಿಕರನ್ನು ಸ್ವಾಗತಿಸಿದರು.

●

ಮುಖಪುಟದಲ್ಲಿ ಮುದ್ರಿತವಾದ ಅಂತರರಾಷ್ಟ್ರೀಯ ಗೀತೆ ಮತ್ತು ಗೀತೆಯ ಕುರಿತು ಪರಿಚಯವನ್ನು ಸಿ. ಪಿ. ಯು. ನ 12 ನೇ ಜಿಲ್ಲಾ ಸಮ್ಮೇಳನದ ಸ್ಮರಣ ಸಂಚಿಕೆಯಿಂದ ಆಯ್ದುಕೊಳ್ಳಲಾಗಿದೆ. ಪೂರೈಸಿದ ಕಾ|| ಎಂ. ಸಿ. ವೆಂಕಟ್ರಾಮ್ ಮತ್ತು ಶ್ರೀನಿವಾಸ್ ಭಟ್‌ರಿಗೆ ನಾವು ಋಣಿ.

ಪರಿಸರ

○ ಹಿಂಸಾತ್ಮಕವಾದ ಚಳುವಳಿಗೆ ಸರಕಾರ ಹೆದರುತ್ತದೆ. ಶಾಂತಿಯುತವಾಗಿ ಚಳುವಳಿ ನಡೆಸುವವರನ್ನು ಲಕ್ಷಿಸುವುದೇ ಇಲ್ಲ.

—ಐ.ಎನ್.ಟಿ.ಯು.ಸಿ.(ಐ)ಯ ಡಿ.ವೆಂಕಟೇಶ್, ಸುಧಾ ಮೇ 2

○ (ನಿರುದ್ಯೋಗಿಗಳಿಗೆ) ನಗದು ಪರಿಹಾರ ಸಾಧ್ಯವಿಲ್ಲವೆನ್ನುವುದು ಸರಕಾರದ ನಿಲುವಾದರೆ ಆ ವಿಶಿಷ್ಟ ಪರಿಸ್ಥಿತಿಯಿಂದಾಗಿಯೇ ಕೆಲವು ಕ್ಷೇತ್ರಗಳಲ್ಲಿ ಅತಿ ಯಾಂತ್ರೀಕರಣ ನಿಧಾನಗೊಳಿಸುವುದೂ ಅಗತ್ಯ.

—ಪ್ರಜಾವಾಣಿ, ಏಪ್ರಿಲ್ 23

○ ಎರಡು ವರ್ಷಗಳ ಹಿಂದೆ, ಯೋಜನಾ ಆಯೋಗದ ವರದಿಯೊಂದರ ಪ್ರಕಾರ ('ಕೂಲಿಗಾಗಿ ಕಾಳು' ಯೋಜನೆಯ) ಧಾನ್ಯ ಸರಬರಾಜನ್ನು ಪಿಂಗಾಣಿ ಸಾಮಾನು ಹಾಗೂ ಪಿಠೋಪಕರಣ ಖರೀದಿಗಾಗಿ ಅಧಿಕೃತವಾಗಿ ಮಾರಲಾಗಿದೆ.

— ಇಂಡಿಯನ್ ಎಕ್ಸ್‌ಪ್ರೆಸ್. ಏಪ್ರಿಲ್ 28

○ ಭಿನ್ನಮತೀಯರ ಚಟುವಟಿಕೆಗಳ ಬಗ್ಗೆ ಅಧಿಕೃತ ಉಮೇದುವಾರರಿಂದ ದೂರುಗಳು ಎಲ್ಲಾ ರಾಜ್ಯಗಳಿಂದ ಎ.ಐ.ಸಿ.ಸಿ.ಗೆ ಬಂದಿವೆ. ಹಿಮಾಚಲ ಪ್ರದೇಶ, ಹರ‍್ಯಾಣಾ ಹಾಗೂ ಕೇರಳದಲ್ಲಿ ಇಂತಹ ಚಟುವಟಿಕೆಗಳು ತುಂಬಾ ಗಂಭೀರ ಸ್ವರೂಪ ಪಡಿದಿವೆ.

—ಇಂಡಿಯನ್ ಎಕ್ಸ್‌ಪ್ರೆಸ್, ಏ. 27

○ "ದೇಶದ ವಿವಿಧ ಪ್ರದೇಶಗಳಲ್ಲಿ ನಡೆಯುತ್ತಿರುವ ಗಲಭೆಗಳಿಗೆ, ಹಿಂಸಾಚಾರಕ್ಕೆ ಹೋಲಿಸಿದರೆ, ಪಂಜಾಬ್ ಶಾಂತಿಯುತ ರಾಜ್ಯ... ಉ. ಪ್ರ. ದಲ್ಲಿ 2858 ಡಕಾಯಿತಿಗಳು ಮತ್ತು 5068 ಕೊಲೆಗಳು 1981ರಲ್ಲಿ ನಡೆದರೆ ಪಂಜಾಬ್‌ನಲ್ಲಿ 1 ಡಕಾಯಿತಿ ಮತ್ತು 620 ಕೊಲೆಗಳು ನಡೆದವು... ಹಿಂಸಾಚಾರ ಉತ್ತರ ಪ್ರದೇಶ ಮತ್ತು ಬಿಹಾರದ ಜಾಯಮಾನಕ್ಕೆ ಅಂಟಿಕೊಂಡ ಜಾಡ್ಯ..."

—ಪಂಜಾಬ್ ಸರಕಾರ ಕಾನೂನು ಮತ್ತು ಶಾಂತಿಯ ಬಗ್ಗೆ ತನ್ನ ಎಂ. ಪಿ. ಗಳಿಗೆ ಕಳಿಸಿದ ಪತ್ರದಲ್ಲಿ.

(ಕುಲದೀಪ್ ನಯ್ಯಾರ್‌ರಿಂದ ಸಂಡೇಯಲ್ಲಿ ಉಲ್ಲೇಖ)

○ ಆರ್ಥಿಕವಾಗಿ ದುರ್ಬಲವಿರುವ 146 ದೇಶಗಳಿಗೆ ಐ. ಎಂ. ಎಫ್. ಮಂಜೂರು ಮಾಡಿದ ಸಾಲದಲ್ಲಿ ಕಾಲಂಶವನ್ನು, ಈ ದೇಶಗಳು ಐ. ಎಂ. ಎಫ್.ನ ಕರಾಳ ನೀತಿಗಳನ್ನು ಜಾರಿಗೆ ತರದಿರುವುದರಿಂದ ಮತ್ತು ತರಲು ಸಾಧ್ಯವಾಗದೆ ಇರುವುದರಿಂದ ಕಡಿತ ಮಾಡಿದೆ... ಮೇಲ್ನೋಟಕ್ಕೆ ಕಾಣುವ ಹಾಗೆ ರೀಗನ್ ಆಡಳಿತ ಮತ್ತು ಇತರ ಪಶ್ಚಿಮ ಯೂರೋಪಿನ ದೇಶಗಳ ಒತ್ತಾಯದ ಮೇಲೆ ಇದು ನಡೆಯುತ್ತಿದೆ.

— ಇ. ಎಸ್. ಎಸ್.

ಬೀದರ್ ಉಪ-ಚುನಾವಣೆ

ಜನತಾ ಪಕ್ಷಕ್ಕೆ ಸಿ. ಪಿ. ಐ.(ಎಂ) ಬೆಂಬಲ

ಮೇ 19 ರಂದು ನಡೆಯಲಿದ್ದ ಬೀದರ್‌ಕ್ಷೇತ್ರದ ಉಪಚುನಾವಣೆಯಲ್ಲಿ ಸ್ಪರ್ಧಿಸಿದ್ದ ಸಿ.ಪಿ.ಐ. (ಎಂ) ಅಭ್ಯರ್ಥಿ ಕಾ|| ಸಂಗ್ರಾಮ್ ಅವರು ತಮ್ಮ ನಾಮಪತ್ರ ಹಿಂತೆಗೆದುಕೊಂಡಿದ್ದಾರೆ.

ಸರ್ವಾಧಿಕಾರಿ ಕಾಂಗ್ರೆ ಅಭ್ಯರ್ಥಿಯ ವಿರುದ್ಧ ಮತಗಳು ಹಂಚಿಹೋಗದಂತೆ ತಡೆಗಟ್ಟಲು, ಜನತಾ ಅಭ್ಯರ್ಥಿಯನ್ನು ಬೆಂಬಲಿಸಲು ಸಿ.ಪಿ.ಐ. (ಎಂ) ನಿರ್ಧರಿಸಿದೆ.

ಏಪ್ರಿಲ್ 28ರಂದು ಬೆಂಗಳೂರಿನಲ್ಲಿ ಸಿ.ಪಿ.ಐ, ಸಿ.ಪಿ.ಐ. (ಎಂ) ಮತ್ತು ಜನತಾ ಪಕ್ಷದ ಪ್ರತಿನಿಧಿಗಳ ನಡುವೆ ನಡೆದ ಚರ್ಚೆಯ ನಂತರ ಈ ತೀರ್ಮಾನಕ್ಕೆ ಬರಲಾಯಿತು. ಜನತಾ ಪಕ್ಷದ ಶ್ರೀ ಎಸ್. ಆರ್. ಬೊಮ್ಮಾಯಿ, ಸಿ.ಪಿ.ಐ. (ಎಂ) ಪರವಾಗಿ ಕಾ|| ಎಂ. ಕೆ. ಭಟ್ ಮತ್ತು ಕಾ|| ಎಸ್. ಸೂರ್ಯನಾರಾಯಣರಾವ್ ಮತ್ತು ಸಿ.ಪಿ.ಐ. ಪರವಾಗಿ ಕಾ|| ಬಿ. ವಿ. ಕಕ್ಕಿಲ್ಲಾಯ ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಕಾಂಗ್ರೆ ಅಭ್ಯರ್ಥಿಯನ್ನು ಪರಾಭವಗೊಳಿಸಲು ಜನತಾ ಪಕ್ಷದ ಅಭ್ಯರ್ಥಿಯ ಪರವಾಗಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಚುನಾವಣಾ ಪ್ರಚಾರ ಕೈಗೊಳ್ಳಲಿದೆ.

ಪೇಜಾವರದಲ್ಲಿ

ಅಂಬೇಡ್ಕರ್ ಜಯಂತಿ

14-4-82 ರಂದು ಮಂಗಳೂರು ತಾಲ್ಲೂಕಿನ ಪೇಜಾವರದಲ್ಲಿ ದ. ಸಂ. ಸ. ಯ ಮಂಗಳೂರು ಶಾಖೆಯ ಆಶ್ರಯದಲ್ಲಿ ಡಾ|| ಬಿ. ಆರ್ ಅಂಬೇಡ್ಕರ್‌ರವರ 91 ನೇ ಜನ್ಮದಿನೋತ್ಸವವನ್ನು ಆಚರಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಕೆ. ಸಿ. ಬಸವರಾಜ್ ವಹಿಸಿದ್ದರು. ಸಮಾರಂಭದ ಉದ್ಘಾಟನೆಯನ್ನು ಕಾ|| ಬಿ. ರಾಮಕೃಷ್ಣ ನೆರವೇರಿಸಿದರು.

ಮುಖ್ಯ ಅತಿಥಿಗಳಾಗಿ ಪಿ. ಕಮಲಾಕ್ಷ ಮತ್ತು ಶ್ರೀ ಎಡ್ವರ್ಡ್‌ಫರ್ನಾಂಡಿಸ್ ಆಗಮಿಸಿದ್ದರು. ಕೊನೆಯಲ್ಲಿ ಕಾ|| ದೇವದಾಸ್ ವಂದಿಸಿದರು.

ಏಪ್ರಿಲ್ 24 ಮತ್ತು 25 ರಂದು ಬಂಟ್ವಾಳದಲ್ಲಿ ನಡೆದ

೪ನೇ ರಾಜ್ಯ ಬೀಡಿ ಕಾರ್ಮಿಕರ ಸಮ್ಮೇಳನ

ಏಪ್ರಿಲ್ 24 ಮತ್ತು 25ರಂದು ದ.ಕ. ಜಿಲ್ಲೆಯ ಬಂಟ್ವಾಳದಲ್ಲಿ 4ನೇ ರಾಜ್ಯ ಬೀಡಿ ಕಾರ್ಮಿಕರ ಸಮ್ಮೇಳನ ಯಶಸ್ವಿಯಾಗಿ ಜರುಗಿತು. ಸಮ್ಮೇಳನಕ್ಕೆ ಮುಖ್ಯ ಅತಿಥಿಯಾಗಿ ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸಂಚಾಲಕಿ ಕಾ|| ವಿಮಲ ರಣದಿವೆ ಆಗಮಿಸಿದ್ದರು. ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ನಿನ ಅಧ್ಯಕ್ಷ ಕಾ|| ಸೂರ್ಯನಾರಾಯಣರಾವ್ ಸಮ್ಮೇಳದ ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನವನ್ನು ರಾಜ್ಯ ಸಿ ಐ ಟಿ ಯು ಪ್ರಧಾನ ಕಾರ್ಯದರ್ಶಿ ಕಾ|| ಸಿ. ನಂಜುಂಡಪ್ಪ ಅವರು ಉದ್ಘಾಟಿಸಿದರು.

ಏಪ್ರಿಲ್ 25 ರಂದು ಕಾರ್ಮಿಕರ ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ನಡೆಯಿತು. ಸಮ್ಮೇಳನದ ಕಲಾಪಗಳ ಪೂರ್ತಿ ವಿವರವನ್ನು ಮುಂದಿನವಾರ ಕೊಡಲಾಗುವದು.

●

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT.